# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜನವರಿ 08, 2022

ಸಂಪುಟ : 48 ಸಂಚಿಕೆ : 238 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## 12 ಅಡಿಯ ಅಂಬೇಡ್ಕರ್ ಪುತ್ಥಳಿ

### ವೃತ್ತವೂ ನವೀಕರಣ: ಸಂಸದ-ಶಾಸಕರಿಂದ ಭೂಮಿ ಪೂಜೆ

ದಾವಣಗೆರೆ, ಜ.7 - ನಗರದ ಅಂಬೇಡ್ಕರ್ ವೃತ್ತದಲ್ಲಿ 12 ಅಡಿ ಎತ್ತರದ ಡಾ. ಬಿ.ಆರ್. ಅಂಬೇಡ್ಕರ್ ಅವರ ನೂತನ ಪುತ್ಥಳಿ ನಿರ್ಮಿಸಿದ ಮೇಲೆ ಅದಕ್ಕೆ ಯಾವುದೇ ರೀತಿಯ ಅವಮಾನ ಆಗದಂತೆ ಜವಾಬ್ದಾರಿ ವಹಿಸುವಂತೆ ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆಗೆ ಸೂಚಿಸಲಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದರು.

ಅವರು, ಇಂದು ಅಂಬೇಡ್ಕರ್ ವೃತ್ತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ನೂತನ ಪುತ್ಥಳಿ ನಿರ್ಮಾಣಕ್ಕೆ ಶಾಸಕ ಎಸ್.ಎ. ರವೀಂದ್ರನಾಥ ಹಾಗೂ ಇನ್ನಿತರರ ಜೊತೆಗೂಡಿ ಭೂಮಿ ಪೂಜೆ ನೆರವೇರಿಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣದ ಜೊತೆಗೆ ಅಂಬೇಡ್ಕರ್ ವೃತ್ತವನ್ನೂ ನವೀಕರಣ ಮಾಡಲಾಗುವುದು. ವೃತ್ತದ ಸುತ್ತಲು ಸ್ಟೀಲ್ ರೈಲಿಂಗ್ (2ನೇ ಪುಟಕ್ಕೆ)

# ರಾಜ್ಯದಲ್ಲಿ ಲಾಕ್‌ಡೌನ್ ಹೇರಿಕೆ ಇಲ್ಲ

### ಎರಡು ಡೋಸ್ ಲಸಿಕೆ ಪಡೆದವರಿಗೆ ಗ್ರೀನ್ ಪಾಸ್ : ಸಚಿವ ಸುಧಾಕರ್


ಬೆಂಗಳೂರು, ಜ.7 - ಕೊರೊನಾ ಎರಡು ಲಸಿಕೆ ಪಡೆದವರಿಗೆ ಗ್ರೀನ್ ಪಾಸ್ ವಿತರಿಸಲಾಗುವುದು ಎಂದಿರುವ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ರಾಜ್ಯದಲ್ಲಿ ಲಾಕ್‌ಡೌನ್ ಹೇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಕೆಲವು ಬಿಗಿ ಕ್ರಮಗಳನ್ನು ಕೈಗೊಳ್ಳುವ ಉದ್ದೇಶ ಮತ್ತು ಸೋಂಕಿತರಿಗೆ ಉತ್ತಮ ಔಷಧೋಪಚಾರ ಕಲ್ಪಿಸುವ ಸಂಬಂಧ ಹಿರಿಯ ಅಧಿಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದರು.

ಲಾಕ್‌ಡೌನ್ ಕಳೆದು ಹೋಗಿರುವ ನೀತಿ. ಆರಂಭ ಹಂತದಲ್ಲಿ ಕೊರೊನಾ ಸೋಂಕು ವೈರಾಣುವಿನ ಗುಣ ಮತ್ತು ಸ್ವಭಾವ, ಚಿಕಿತ್ಸಾ ವಿಧಾನ ಯಾವುದೂ ಗೊತ್ತಿರಲಿಲ್ಲ. ಆಗ ಅನುಭವದ ಕೊರತೆಯಿಂದ ಲಾಕ್‌ಡೌನ್ ಘೋಷಿಸಿದ್ದೆವು. ಇನ್ನು ಮುಂದೆ ಹಾಗಾಗುವುದಿಲ್ಲ ಎಂದರು.

ಎರಡು ವರ್ಷಗಳ ಅನುಭವ, ಕೊರೊನಾ ನಿಯಂತ್ರಣ ಮತ್ತು ಚಿಕಿತ್ಸೆಯ ಅರಿವಿದೆ. ಈಗ ಲಾಕ್‌ಡೌನ್ ಜಾರಿಗೊಳಿಸುವುದರಿಂದ ಕೊರೊನಾ ನಿಯಂತ್ರಿಸಲು ಸಾಧ್ಯವಿಲ್ಲ. ಲಸಿಕೆ ಮತ್ತು ಮುನ್ನೆಚ್ಚರಿಕೆಯಿಂದ ಮಾತ್ರ ಸಾಧ್ಯ ಎಂದರು.

ಓಮಿಕ್ರಾನ್ ಸೋಂಕು ತಡೆಯುವುದು ಅಸಾಧ್ಯ. ಇದರಿಂದ ಪ್ರಕರಣಗಳು ಹೆಚ್ಚಾಗಲಿವೆ. ಆದರೆ ಯಾವುದೇ ತೊಂದರೆಯಾಗುವುದಿಲ್ಲ. ಜನರು (2ನೇ ಪುಟಕ್ಕೆ)



ಲಾಕ್‌ಡೌನ್‌ನಿಂದ ಕೊರೊನಾ ನಿಯಂತ್ರಿಸಲು ಸಾಧ್ಯವಿಲ್ಲ. ಲಸಿಕೆ ಮತ್ತು ಮುನ್ನೆಚ್ಚರಿಕೆಯಿಂದ ಮಾತ್ರ ಸಾಧ್ಯ ”

## ರಾಜ್ಯಾದ್ಯಂತ ವಾರಾಂತ್ಯದ ಕರ್ಫ್ಯೂ ಆರಂಭ

ಬೆಂಗಳೂರು, ಜ. 7 – ಕೊರೊನಾ ಹರಡುವುದನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಹೇರಿರುವ ವಾರಾಂತ್ಯದ ಕರ್ಫ್ಯೂ ಶುಕ್ರವಾರ ರಾತ್ರಿಯಿಂದ ಜಾರಿಗೆ ಬಂದಿದೆ.

ಇದೇ 19 ರವರೆಗೆ ವಾರಾಂತ್ಯ ಕರ್ಫ್ಯೂ ಜೊತೆಗೆ ಕೆಲವು ನಿರ್ಬಂಧಗಳನ್ನು ವಿಧಿಸಿರುವುದಲ್ಲದೆ, ರಾಜಧಾನಿ ಬೆಂಗಳೂರಿನಲ್ಲಿ 144ನೇ ಸೆಕ್ಷನ್ ಜಾರಿಗೊಳಿಸಲಾಗಿದೆ.

ರಾಜ್ಯಾದ್ಯಂತ ವಾರಾಂತ್ಯದ (2ನೇ ಪುಟಕ್ಕೆ)

## ವಿಐಪಿಗಳ ಒತ್ತಡದಿಂದ ಆಸ್ಪತ್ರೆಗೆ ದಾಖಲಿಸಿಕೊಂಡರೆ ಕ್ರಮ

ಮೂರನೇ ಅಲೆ ಸೋಂಕು ತಗುಲಿದವರಿಗೆ ಕಡಿಮೆ ತೀವ್ರತೆ ಇರುವುದರಿಂದ ಬಹುತೇಕರು ಮನೆಯಲ್ಲೇ ಚಿಕಿತ್ಸೆ ಪಡೆಯಬಹುದು ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ.

ಸೋಂಕಿತರಿಗೆ ಟೆಲಿಮೆಡಿಷನ್ ಮೂಲಕ ಆರೋಗ್ಯ ವಿಚಾರಿಸಿ, ಚಿಕಿತ್ಸೆ ಮತ್ತು ಔಷಧಿ ನೀಡಲು ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಹತ್ತು ಸಾವಿರ ವೈದ್ಯರನ್ನು ನಿಯೋಜಿಸುವುದಾಗಿ ಅವರು ತಿಳಿಸಿದ್ದಾರೆ.

**ಮೂರನೇ ಅಲೆ ಸೋಂಕಿತರಲ್ಲಿ ಬಹುತೇಕರಿಗೆ ಮನೇಲಿ ಚಿಕಿತ್ಸೆ**

ಇದಕ್ಕಾಗಿ ಪ್ರತ್ಯೇಕ ಟೋಲ್‌ನಂಬರ್ ನೀಡಲಾಗುವುದು. ಸೋಂಕಿಗೆ ಒಳಗಾಗಿ ತೀವ್ರತೆ ಇಲ್ಲದವರು ಆಸ್ಪತ್ರೆ ಸೇರುವ ಅವಶ್ಯಕತೆ ಇಲ್ಲ. ಎಂತಹ ಸೋಂಕಿತರು ಆಸ್ಪತ್ರೆಗೆ ದಾಖಲಾಗಬೇಕು ಎಂಬುದರ ಬಗ್ಗೆ ಆರೋಗ್ಯ ಇಲಾಖೆ ಮಾರ್ಗಸೂಚಿ ಪ್ರಕಟಿಸಲಿದೆ. ಅದರಂತೆ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲು ಮಾಡಿಕೊಳ್ಳಬೇಕು ಎಂದವರು ಹೇಳಿದರು. (2ನೇ ಪುಟಕ್ಕೆ)

## ಕಾಮಗಾರಿಗಳ ವಿಳಂಬದಿಂದ ಜನಪ್ರತಿನಿಧಿಗಳ ಗೌರವಕ್ಕೆ ಹಾನಿ



ದಾವಣಗೆರೆ, ಜ. 7 - ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಡಿ ಕೈಗೊಳ್ಳುವ ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿರುವ ಸಂಸದ ಜಿ.ಎಂ. ಸಿದ್ದೇಶ್ವರ, ಜನಪ್ರತಿನಿಧಿಗಳ ಗೌರವ ಉಳಿಸುವ ಬದಲು ಗೌರವ ಕಳೆಯುವ ಪ್ರಶ್ನೆ ಉದ್ಭವಿಸುತ್ತಿದೆ ಎಂದಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರೆಯಲಾಗಿದ್ದ 17ನೇ ಲೋಕಸಭಾ ಅವಧಿಯ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಹಾಗೂ ಆದರ್ಶ ಗ್ರಾಮಗಳ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಕ್ಷೇತ್ರಾಭಿವೃದ್ಧಿ ನಿಧಿಯ ಕಾಮಗಾರಿಗಳಿಗೆ ತ್ವರಿತ ಆಡಳಿತಾತ್ಮಕ ಅನುಮೋದನೆ ದೊರೆತು, ಮೂರು ತಿಂಗಳಲ್ಲೇ ಕಾಮಗಾರಿ ಪೂರ್ಣವಾಗಬೇಕು. ಆದರೆ, ಕೆಲವು ಕಾಮಗಾರಿಗಳು 9 ತಿಂಗಳಾದರೂ ಪೂರ್ಣವಾಗಿಲ್ಲ ಎಂದವರು ಅಸಮಾಧಾನ ವ್ಯಕ್ತಪಡಿಸಿದರು.

2020ರಲ್ಲೇ ಕಾಮಗಾರಿಗಳಿಗೆ ಅನುದಾನ ನೀಡಿದ್ದರೂ ವಿಳಂಬವಾಗುತ್ತಿದೆ. ಚುನಾವಣೆಯೊಳಗೆ ಕಾಮಗಾರಿ ಪೂರ್ಣಗೊಳ್ಳದಿದ್ದರೆ ಜನರಿಗೆ ವಾಗ್ದಾನ ಮಾಡಿಯೂ ಕಾಮಗಾರಿ ಮಾಡಿಸಲಿಲ್ಲ ಎಂಬ ಆರೋಪ ತಮ್ಮ ಮೇಲೆ ಬರುತ್ತದೆ. ಮುಂದಿನ (3ನೇ ಪುಟಕ್ಕೆ)

### ಸಂಸದರ ಪ್ರದೇಶಾಭಿವೃದ್ಧಿ ಕಾಮಗಾರಿ ತ್ವರಿತ ಪೂರ್ಣಗೊಳಿಸಲು ಸಂಸದ ಜಿ.ಎಂ. ಸಿದ್ದೇಶ್ವರ ತಾಕೀತು

**ಹೆಸರು ದೊಡ್ಡದಿರಲಿ**

**ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಮಾಡಲಾದ ಕೆಲಸಗಳಲ್ಲಿ ಅವರ ಹೆಸರು ದೊಡ್ಡದಾಗಿದ್ದರೆ, ಸಂಸದರ ಕ್ಷೇತ್ರಾಭಿವೃದ್ಧಿ ಅನುದಾನದ ಕಾಮಗಾರಿಗಳಲ್ಲಿ ತಮ್ಮ ಹೆಸರು ಚಿಕ್ಕದಾಗಿರುತ್ತದೆ. ನಾನೇನು ನಿಮ್ಮ ವೈರಿಯೇ? ಎಂದು ಸಂಸದ ಸಿದ್ದೇಶ್ವರ ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ. ಶಾಸಕರ ರೀತಿಯಲ್ಲೇ ತಮ್ಮ ಹೆಸರನ್ನು ದೊಡ್ಡದಾಗಿ ಫಲಕಗಳಲ್ಲಿ ಹಾಕುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.**

## ನೀಟ್ - ಪಿ.ಜಿ. ಆರ್ಥಿಕ ಮೀಸಲಾತಿಗೆ ಅನುಮತಿ

ನವದೆಹಲಿ, ಜ. 7 – ಈಗಿರುವ ಶೇ.27 ಒ.ಬಿ.ಸಿ. ಹಾಗೂ ಶೇ.10ರ ಆರ್ಥಿಕ ಮೀಸಲಾತಿ ಅನ್ವಯವೇ ನೀಟ್ - ಪಿ.ಜಿ.ಯ ಅಖಿಲ ಭಾರತೀಯ ಕೋಟಾ ಸೀಟುಗಳಿಗೆ ಪ್ರವೇಶಾತಿ ಕಲ್ಪಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಇದರಿಂದಾಗಿ ಬಹಳ ದಿನಗಳಿಂದ ವಿಳಂಬವಾಗಿದ್ದ ನೀಟ್ - ಪಿ.ಜಿ. ಕೌನ್ಸೆಲಿಂಗ್ ಆರಂಭವಾಗಲು ಮಾರ್ಗ ತೆರವಾಗಿದೆ.

ಪ್ರವೇಶ ಪ್ರಕ್ರಿಯೆ ಆರಂಭಿಸುವುದು ತುರ್ತು ಅಗತ್ಯವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದು ಪಿ.ಜಿ. ಕೋರ್ಸ್‌ಗಳ ಪ್ರವೇಶಕ್ಕೆ ಕಾಯುತ್ತಿರುವ ವೈದ್ಯರನ್ನು ನಿರಾಳಗೊಳಿಸಿದೆ.

ಸತತ ಎರಡು ದಿನಗಳ ಕಾಲ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್. ಬೋಪಣ್ಣ (2ನೇ ಪುಟಕ್ಕೆ)

## ದೂಡಾ ಯೋಜನೆ: ಜಮೀನು ನೀಡಲು ರೈತರ ಸಮ್ಮತಿ



ದಾವಣಗೆರೆ, ಜ. 7- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಯೋಜನೆ ಅಭಿವೃದ್ಧಿ ಪಡಿಸಲು ಕುಂದುವಾಡ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಒಟ್ಟು 53 ಎಕರೆ 19.8 ಗುಂಟೆ ಜಮೀನು ನೀಡಲು ರೈತರು ಸಮ್ಮತಿಸಿದ್ದಾರೆ ಎಂದು ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್ ತಿಳಿಸಿದ್ದಾರೆ.

ಪ್ರಾಧಿಕಾರವು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ಹಸಿರು ವಲಯದಲ್ಲಿರುವ ಕುಂದವಾಡ ಗ್ರಾಮದ ಬಳಿ ವಸತಿ ಯೋಜನೆ ಅಭಿವೃದ್ಧಿಪಡಿಸಲು ನೇರ ಖರೀದಿ ಮುಖಾಂತರ ಜಮೀನು ನೀಡಲು ಸಂಬಂಧಿಸಿದ ಖಾತೆದಾರರೊಂದಿಗೆ ದರ ನಿಗದಿ ಮಾಡಲು ಇಂದು ಸಭೆ ನಡೆಸಲಾಯಿತು. ಜಿಲ್ಲಾಧಿಕಾರಿಗಳು ಜಮೀನಿಗೆ ಎಕರೆ (3ನೇ ಪುಟಕ್ಕೆ)

## ಓಮಿಕ್ರಾನ್ : ಸೋಂಕಿನ ಅಲೆ ಏರಿದಂತೆ ಸಾವುಗಳು ಇಳಿಕೆ

ಎಸ್.ಎ. ಶ್ರೀನಿವಾಸ್

ಓಮಿಕ್ರಾನ್ ಸೋಂಕಿನ ನಂತರ ಕಂಡು ಬಂದಿರುವ ಕೊರೊನಾದ ಅಲೆ ಭಾರತವಷ್ಟೇ ಅಲ್ಲ ವಿಶ್ವದಾದ್ಯಂತ ವ್ಯಾಪಿಸುತ್ತಿದೆ. ಪ್ರತಿನಿತ್ಯ ಕಂಡು ಬರುತ್ತಿರುವ ಪ್ರಕರಣಗಳ ಸಂಖ್ಯೆ ಹಿಂದಿನ ಎರಡು ಅಲೆಗಳನ್ನು ಮೀರುವಂತಿದೆ. ಆದರೆ, ಆಸಕ್ತಿಕರ ಅಂಶವೆಂದರೆ ಕೊರೊನಾ ಪ್ರಕರಣಗಳು ಏರುತ್ತಿದ್ದರೆ, ಸಾವಿನ ಪ್ರಕರಣಗಳು ಕಡಿಮೆಯಾಗುತ್ತಿವೆ!

ಭಾರತದಲ್ಲಿ ಕಳೆದ ವರ್ಷ ಡಿ.2ರಂದು ಓಮಿಕ್ರಾನ್‌ನ ಮೊದಲ ಪ್ರಕರಣ ಬೆಂಗಳೂರಿನಲ್ಲಿ ಕಂಡು ಬಂದಿತ್ತು. ಆಗ ಭಾರತದಲ್ಲಿ ವಾರದ ಸರಾಸರಿ ಕೊರೊನಾ ಪ್ರಕರಣಗಳ ಸಂಖ್ಯೆ 8,618. ಅದೇ ವೇಳೆ ವಾರದ ಸರಾಸರಿ ಸಾವಿನ ಪ್ರಕರಣಗಳು 391 ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ-ಅಂಶಗಳು ತಿಳಿಸಿವೆ.

ನಂತರ ಕಳೆದ ಜನವರಿ 6ರಂದು ವಾರದ ಸರಾಸರಿ ಪ್ರಕರಣಗಳ ಸಂಖ್ಯೆ 55,369ಕ್ಕೆ ತಲುಪಿದೆ. ಇದೇ ವೇಳೆ ವಾರದ ಸರಾಸರಿ ಸಾವಿನ ಸಂಖ್ಯೆ 300ಕ್ಕೆ ಇಳಿಕೆಯಾಗಿದೆ.

ದೇಶದಲ್ಲಿ ಅತಿ ಹೆಚ್ಚು ಕೊರೊನಾ ಪ್ರಕರಣಗಳು ಕಂಡು ಬರುತ್ತಿರುವ ಮಹಾರಾಷ್ಟ್ರದಲ್ಲೂ ಇದೇ ಪ್ರವೃತ್ತಿ ಇದೆ. ಕಳೆದ ಡಿಸೆಂಬರ್ 2ರಂದು ವಾರದ ಸರಾಸರಿ ಪ್ರಕರಣಗಳ ಸಂಖ್ಯೆ 588 ಹಾಗೂ ಸಾವು 27 ಆಗಿತ್ತು. ಜನವರಿ 6ರಂದು ವಾರದ ಸರಾಸರಿ ಪ್ರಕರಣಗಳ ಸಂಖ್ಯೆ 17,506ಕ್ಕೆ ಏರಿಕೆಯಾಗಿದ್ದರೆ, ಸಾವಿನ ಸಂಖ್ಯೆ 11ಕ್ಕೆ ಇಳಿಕೆಯಾಗಿದೆ.

ದೆಹಲಿಯಲ್ಲಿ ಡಿ.2ರಂದು ವಾರದ ಸರಾಸರಿ ಪ್ರಕರಣಗಳು 58 ಹಾಗೂ ಸಾವಿನ ಸಂಖ್ಯೆ ಶೂನ್ಯದಷ್ಟಿತ್ತು. ಜನವರಿ 6ರಂದು ವಾರದ ಸರಾಸರಿ ಪ್ರಕರಣಗಳು 6,150ಕ್ಕೆ ಏರಿಕೆಯಾಗಿದ್ದರೆ, ಸಾವಿನ ಪ್ರಮಾಣ ಮೂರಕ್ಕೆ ಏರಿಕೆಯಾಗಿದೆ. ಪಶ್ಚಿಮ ಬಂಗಾಳದಲ್ಲಿ (2ನೇ ಪುಟಕ್ಕೆ)

**ಭಾರತ- ವಿಶ್ವದಾದ್ಯಂತ ಕಂಡು ಬರುತ್ತಿರುವ ಕುತೂಹಲಕಾರಿ ಬೆಳವಣಿಗೆ**

## ಕರ್ಫ್ಯೂ ವೇಳೆ ಮದ್ಯ ಮಾರಾಟ ನಿಷೇಧ

ಬೆಂಗಳೂರು, ಜ.7 - ಕರ್ಫ್ಯೂ ಜಾರಿಯಲ್ಲಿರುವ ಅವಧಿಯಲ್ಲಿ ರಾಜ್ಯಾದ್ಯಂತ ಮದ್ಯ ಮಾರಾಟ ಸಂಪೂರ್ಣ ನಿಷೇಧಿಸಲಾಗಿದೆ ಎಂದು ಅಬಕಾರಿ ಸಚಿವ ಕೆ. ಗೋಪಾಲಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ವಾರಾಂತ್ಯದ ಲಾಕ್‌ಡೌನ್ ಘೋಷಿಸಿದೆ. ಹೀಗಾಗಿ ಶುಕ್ರವಾರ ರಾತ್ರಿ 8 ಗಂಟೆಯಿಂದ ಸೋಮವಾರ ಬೆಳಗಿನವರೆಗೆ ರಾಜ್ಯಾದ್ಯಂತ ಮದ್ಯ ಮಾರಾಟ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕೆಲವು ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ (3ನೇ ಪುಟಕ್ಕೆ)

### ಹಾಲೇಕಲ್ಲು ಹೆಚ್. ಕೊಟ್ರಪ್ಪ ನಿಧನ



ಜಗಳೂರು ತಾಲ್ಲೂಕು ಹಾಲೇಕಲ್ಲು ಗ್ರಾಮದ ವಾಸಿ, ಹಾಲೇಕಲ್ಲು ಹಾಲು ಉತ್ಪಾದಕರ ಸಂಘದ ಮಾಜಿ ಅಧ್ಯಕ್ಷರಾದ **ಶ್ರೀ ಹೆಚ್. ಕೊಟ್ರಪ್ಪ** ಅವರು ದಿನಾಂಕ 7.1.2022ರ ಶುಕ್ರವಾರ ರಾತ್ರಿ 8.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು.

ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.1.2022ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಹಾಲೇಕಲ್ಲು ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ. 82961-58106, 97433-98735, 82969-07553

### ಆರನೇ ವರ್ಷದ ಪುಣ್ಯಸ್ಮರಣೆ ಹಾಗೂ ಗುರು ವಂದನೆ



ಲಿಂಗೈಕ್ಯ 08.01.2016

**ಡಾ|| ನಿರ್ಮಲಾ ಕೇಸರಿ**

ಇಂದಿಗೆ ತಾವು ನಮ್ಮನ್ನಗಲಿ 6 ವರ್ಷಗಳಾದವು. ಸದಾ ಮಕ್ಕಳ ವೈದ್ಯರಿಗೆ ಹಾಗೂ ಸಮಸ್ತ ಸಮಾಜಕ್ಕೆ ಪ್ರೇರಣೆಯಾಗಿರುವ ಪ್ರೀತಿಯ ಮೇಡಂರವರಿಗೆ ನಮ್ಮೆಲ್ಲರ ನಲುಮೆಯ ಹಾಗೂ ಭಕ್ತಿಪೂರ್ವಕ ಗುರು ವಂದನೆ...

ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರು, ವೈದ್ಯರು, ಶುಶ್ರೂಷಕಿಯರು ಹಾಗೂ ಸಿಬ್ಬಂದಿ ವರ್ಗ.
ದಾವಣಗೆರೆ ಜಿಲ್ಲಾ ಮಕ್ಕಳ ವೈದ್ಯರ ಸಂಘ.
ಮಕ್ಕಳ ಶಾಸ್ತ್ರವಿಭಾಗ, ಜೆಜೆಎಂ ಮೆಡಿಕಲ್ ಕಾಲೇಜ್ ಹಾಗೂ ಎಸ್ಎಸ್ಐಎಂಎಸ್, ದಾವಣಗೆರೆ.
ಸದಸ್ಯರು ಹಾಗೂ ದಾನಿಗಳು ಡಾ|| ನಿರ್ಮಲಾ ಕೇಸರಿ ಟ್ರಸ್ಟ್

### ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಗಂಗಮ್ಮನವರು**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ. ನೀವು ತೋರಿಸಿಕೊಟ್ಟ
ಸನ್ಮಾರ್ಗದಲ್ಲಿ ನಡೆಯುತ್ತಾ, ಸದಾ ನಿಮ್ಮ ಚಿರಸ್ಮರಣೆಯಲ್ಲಿರುವ...

ಪತಿ : ತಿಪ್ಪೇಗುಂಡಿ ಕರಿಯಪ್ಪನವರು, ಶಾಮನೂರು
ಪುತ್ರರು : ಶಾಮನೂರು ಟಿ. ಬಸವರಾಜ್, ಶ್ರೀಮತಿ ಅನಿತಾ ಮತ್ತು ಮಕ್ಕಳು.
ಎಸ್.ಟಿ. ನಾಗರಾಜ್, ಶ್ರೀಮತಿ ಪವಿತ್ರ ಮತ್ತು ಮಕ್ಕಳು.
ಪುತ್ರಿಯರು : ದಿ. ಶ್ರೀಮತಿ ರುದ್ರಮ್ಮ ಗೌಡ್ರ ರಾಜಶೇಖರಪ್ಪ ಮತ್ತು ಮಕ್ಕಳು, ಆಲೂರು.
ಶ್ರೀಮತಿ ಟಿ. ಮಂಗಳ, ಎಂ.ಸಿ. ರುದ್ರಪ್ಪ ಮತ್ತು ಮಕ್ಕಳು, ಆಲೂರು.
ಶ್ರೀಮತಿ ಟಿ.ವನಜಾಕ್ಷಿ, ಸುಭಾಷ್ ಮತ್ತು ಮಕ್ಕಳು, ಕರೂರು.
ಶ್ರೀಮತಿ ಟಿ. ಕವಿತಾ, ಡಿ.ಎಲ್. ರವಿಕುಮಾರ್ ಮತ್ತು ಮಕ್ಕಳು, ಅಸಗೋಡು.
**ತಿಪ್ಪೇಗುಂಡಿ ವಂಶಸ್ಥರು, ಶಾಮನೂರು.**

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
**90601 72745**

**ಸೈಟು ಮಾರಾಟಕ್ಕೆ (ಕೇವಲ $\frac{1}{2}$% ಕಮೀಷನ್‌ಗೆ)**
ವಿದ್ಯಾನಗರ ಮುಂದೆ ಬನಶಂಕರಿ ಲೇಔಟ್ ಸುತ್ತಮುತ್ತ 30x40, 30x50, 40x60 ಮತ್ತು ಬಂಗ್ಲೆ ಸೈಟುಗಳು.
**ಕಿರಣ್ ಬೂಸ್ನೂರ್ : 97315-63409**
**ಏರಿಯಾದ ಸೈಟುಗಳನ್ನು ನಾವು ಕೇವಲ $\frac{1}{2}$% ಕಮೀಷನ್‌ಗೆ ಕೊಡಿಸುತ್ತೇವೆ.**

**ಮಳಿಗೆ ಬಾಡಿಗೆಗೆ ಇದೆ**
ಎಂ.ಸಿ.ಸಿ. 'ಬಿ' ಬ್ಲಾಕ್, 2ನೇ ಕ್ರಾಸ್, ಗುಂಡಿ ಚೌಲ್ರಿ ಪಕ್ಕ 1250 ಚದುರಡಿಯ ಕಾರ್ನರ್ ಮಳಿಗೆ ಬಾಡಿಗೆಗೆ ಕಮರ್ಷಿಯಲ್ ಉದ್ದೇಶಕ್ಕೆ ಇದೆ.
**ಮೊ. 98863-74731**

**ಮನೆ ಮಾರಾಟಕ್ಕಿದೆ**
ಜಯನಗರ ಎ ಬ್ಲಾಕ್‌ನಲ್ಲಿರುವ ಕಾಳಿದಾಸ ಸರ್ಕಲ್ ಹಿಂಭಾಗ ಕಾರ್ನರ್ ಪಶ್ಚಿಮ ದಿಕ್ಕಿನಲ್ಲಿರುವ (30×40) ಎರಡು ಅಂತಸ್ತಿನ ಸುಸಜ್ಜಿತ ವ್ಯವಸ್ಥೆಯ ಹೊಸ ಮನೆ ಮಾರುವುದಿದೆ. ಡೋರ್ ನಂ.790/6/176
**94827 64316**

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಸ್ವಂತ ಬೈಕ್, ಡಿ.ಎಲ್. ಹೊಂದಿರುವ ಕನ್ನಡ, ಇಂಗ್ಲಿಷ್, ಹಿಂದಿ ಓದಲು ಬರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ.
(ಪಾರ್ಟ್ ಟೈಮ್ & ಫುಲ್ ಟೈಮ್)
**99161 20125**
**99649 53137**

**ಮನೆ ಬಾಡಿಗೆಗೆ ಇದೆ**
ವಾಸ್ತು ಹಾಗೂ ಸಕಲ ಸೌಕರ್ಯ ಉಳ್ಳ 2ನೇ ಮಹಡಿಯಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. #1859/34, ಭಾವ ಸಂಗಮ, 4ನೇ ಮುಖ್ಯ ರಸ್ತೆ, LIC ಕಾಲೋನಿ, ನೂತನ ಕಾಲೇಜು ಹಿಂಭಾಗ ದಾವಣಗೆರೆ.
**94487 46875**

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ 30x50 west, 30x40 west, 40x60 East ಡಾಲರ್ಸ್ ಕಾಲೋನಿಯಲ್ಲಿ 30x63 ಕಾರ್ನರ್, 40x63 west
**ರಿಯಲ್ ಎಸ್ಟೇಟ್ ಏಜೆಂಟ್ ಚನ್ನಬಸಪ್ಪ ಐನಳ್ಳಿ**
**99166 12110**

**ಬೇಕಾಗಿದ್ದಾರೆ**
ಜನತಾ ಬಜಾರ್‌ನ ಮಳಿಗೆ ಸಂಖ್ಯೆ 3ರಲ್ಲಿರುವ ಶ್ರೀ ಸಪ್ತಗಿರಿ ವಿವಿಧೋದ್ದೇಶ ಸಹಕಾರ ಸಂಘಕ್ಕೆ ಡಿಟಿಪಿ ಆಪರೇಟರ್ ಮತ್ತು ಕನ್ನಡ, ಇಂಗ್ಲೀಷ್ ಟೈಪಿಂಗ್ ಫಾಸ್ಟ್ ಇರುವಂತ ಯುವಕ-ಯುವತಿಯರು ಮತ್ತು ಇ ಸ್ಟಾಂಪ್ ತೆಗೆಯಲು ಅನುಭವವುಳ್ಳವರು ಬೇಕಾಗಿದ್ದಾರೆ.
**78929 42015, 98440 25346**

**ಸೈಟ್ ಮಾರಾಟಕ್ಕಿದೆ**
50x80 ಅಳತೆಯ ಸೈಟ್ ಜಯನಗರ ಲಿಂಕ್ ರಸ್ತೆಗೆ ಕೂಡುವ ಪಶ್ಚಿಮಕ್ಕೆ 45 ಅಡಿಯ ಮೇನ್ ರೋಡ್ ಹಾಗೂ ಪೂರ್ವದ ಹಿಂಬದಿಗೆ 30 ಅಡಿಯ ಸಿಸಿ ರಸ್ತೆ ಹೊಂದಿದೆ. ನಿಟುವಳ್ಳಿ, ದಾವಣಗೆರೆ.
**86608 09919**
**90607 90962**

**ಜಮೀನು ಮಾರಾಟಕ್ಕಿದೆ**
8 ಗುಂಟೆ ಜಮೀನು (ಮನೆ) ಮಾರಾಟಕ್ಕಿದೆ. ಹರಿಹರ ಹತ್ತಿರ @ Rs 80 Lakhs
**74112 50447**

**House To -Let**
at P.J Extension 4th Main road, 2 Bedroom house, First floor, East facing vaastu new house, with good water facility.
Contact: **70196 73972**

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಕೆಟಿಜೆ ನಗರ 16ನೇ ಕ್ರಾಸ್‌ನಲ್ಲಿ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಹಾಗೂ ಲೀಸ್‌ಗೆ ಇದೆ. ಸಂಪರ್ಕಿಸಿ
**99452 31451**
**70223 03789**

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್**
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
**87490 24789, 94837 64859**

**ಹುಡುಗರು ಬೇಕಾಗಿದ್ದಾರೆ**
ಬ್ಯಾಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಹಾಗು ಟಾಟಾ ಏಸ್ ಡ್ರೈವರ್ ಮತ್ತು ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು, ಕಂಪ್ಯೂಟರ್ ಟ್ಯಾಲಿ ಅನುಭವ ಆದವರು ಬೇಕಾಗಿದ್ದಾರೆ.
**97428 65501**
**99801 55612**

**ಮನೆ ಬಾಡಿಗೆ/ಲೀಸ್‌ಗೆ ಬೇಕೇ?**
ನಿಮ್ಮ ಮನೆ ಬಾಡಿಗೆಗೆ/ಲೀಸ್‌ಗೆ ಇದೆಯೇ? ಉತ್ತಮ ಬಾಡಿಗೆ ಮನೆಗಳು ಮತ್ತು ಉತ್ತಮ ಬಾಡಿಗೆದಾರರಿಗಾಗಿ (ಮನೆ ಮಾಲೀಕರಿಗೆ ನಮ್ಮ ಸರ್ವೀಸ್ ಸಂಪೂರ್ಣ ಉಚಿತ) ಸಂಪರ್ಕಿಸಿ
**ದಿ ಪ್ರಾಪರ್ಟಿ ಸರ್ವೀಸಸ್**
**91489 33445**

**SHOP FOR RENT**
13X10ft, # 361/2, 4th main, 9th cross P.J. Extension Davangere. (Behind) Vishweshwaraiah Park
**94489 29509**

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
**95133 14666**
(ಹೋಂ ಡೆಲಿವರಿ ಮಾತ್ರ)

**ಸೈಟ್ ಮಾರಾಟಕ್ಕಿದೆ**
ದಕ್ಷಿಣ ದಿಕ್ಕಿಗೆ ಮುಖವಾಗಿರುವ 20x30 ಅಳತೆಯ ಸೈಟ್ ಮಾರಾಟಕ್ಕಿದೆ. ವಿಳಾಸ: ಚಿಕ್ಕಮ್ಮಣಿ ದೇವರಾಜ್ ಅರಸ್ ಬಡಾವಣೆ, 15ನೇ ನಂಬರ್ ಬಸ್ ಸೌಕರ್ಯವಿರುತ್ತದೆ. ಆಸಕ್ತರು ಸಂಪರ್ಕಿಸಿ
**97394 38176, 94807 42568**

**2 BHK ಮನೆ ಬಾಡಿಗೆಗಿದೆ**
ಪೂರ್ವ ದಿಕ್ಕಿಗೆ ಬಾಗಿಲುಳ್ಳ, ಸುಸಜ್ಜಿತ 2 BHK, 1ನೇ ಮಹಡಿ ಮನೆ ತಿಮ್ಮಾರೆಡ್ಡಿ, ವಿಜ್ಞಾನ್, ನೂತನ್ ಹಾಗೂ ಬಿಐಇಟಿ ಕಾಲೇಜ್ ಹತ್ತಿರವಿದ್ದು, ಆಂಜನೇಯ ಬಡಾವಣೆ, 18ನೇ ಕ್ರಾಸ್‌ನಲ್ಲಿ ಬಾಡಿಗೆಗಿದೆ.
**9845 216749, 95352 82899**

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
**63631 97523**

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮಲ್ಲಿಗೆ ಹೆಲ್ತ್ ಸೆಂಟರ್ ಬಿಲ್ಡಿಂಗ್, ಆಫೀಸ್ ಅಥವಾ ಕ್ಲಿನಿಕ್‌ಗೆ ಬಾಡಿಗೆಗೆ ಇದೆ.
**77955 07876**

**ಭೂಮಿಕಾ ಮ್ಯಾಟ್ರಿಮೊನಿ**
**ಲಿಂಗಾಯಿತ ವಧು-ವರರ ಕೇಂದ್ರ**
Near Coffee day, Nutana College Road, Vidyanagara, 2nd Main, Davangere
**77603 16576**
**90080 55813**

**ಮನೆ ಬಾಡಿಗೆ/ಲೀಸ್‌ಗೆ**
ಬಸವರಾಜ ಪೇಟೆ 1ನೇ ಮೇನ್, 1ನೇ ಕ್ರಾಸ್ ಡೋರ್ ನಂ. 112/1 ಶ್ರೀ ರಂಗ ನಿಲಯದಲ್ಲಿ, ಡಬಲ್ ಬೆಡ್‌ರೂಂನ ಒಂದು ಮನೆ ಬೋರ್ ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ಸಂಪರ್ಕಿಸಿ
(ಸಸ್ಯಹಾರಿಗಳಿಗೆ ಮಾತ್ರ)
**94484 42446, 94810 39549**

**ಮಾರಾಟಕ್ಕೆ**
ಆವರಗೆರೆ (ಸಿದ್ದಲಿಂಗೇಶ್ವರ ಸ್ಕೂಲ್ ಹತ್ತಿರ) 30×50 (ಪೂರ್ವ), ಕುವೆಂಪು ನಗರ ಸೈಟ್ (ಕಾರ್ನರ್) 40×50, ಶಕ್ತಿನಗರ ಸೈಟ್ (ಉತ್ತರ) 30×45, ಮತ್ತು 30×60 (ಪೂರ್ವ), ಸಿದ್ದವೀರಪ್ಪ ಬಡಾವಣೆ ಸೈಟ್ (ಪಶ್ಚಿಮ)48×50, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64
**78996 36597, 99165 25828**

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 8500/- ಊಟ, ರೂಂ, ಉಚಿತ.
**97400 98047, 97400 98064**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**91132 85992**

**ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ**
ಲಿಂಗಾಯತ ಮಹಿಳೆ ಅಡುಗೆ ಮಾಡಲು ಬೇಕಾಗಿದ್ದಾರೆ.
**ಫೋ. : 97407 02055**

**ಸೈಟ್ ಬೇಕಾಗಿದೆ**
30x50 ಪೂರ್ವ / ಉತ್ತರ ದಿಕ್ಕಿಗಿರುವ ಶಿರಮಗೊಂಡನಹಳ್ಳಿಯಲ್ಲಿ ಅಥವಾ ಕುಂದುವಾಡದ ಹತ್ತಿರ, ಬೈ ಪಾಸ್ ಹತ್ತಿರವಿರುವ ಎಂ.ಬಿ. ಸಿಟಿಯಲ್ಲಿ ಅಪ್ರೂವಲ್ಡ್ ಆದ ಸೈಟ್ ಬೇಕಾಗಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ನೇರವಾಗಿ ಸಂಪರ್ಕಿಸಿ
**94807 42568**

**3BHK ಮನೆ ಲೀಸ್/ಬಾಡಿಗೆಗೆ**
ಎಂ.ಸಿ.ಸಿ. 'ಎ' ಬ್ಲಾಕ್, ಸಾಯಿಬಾಬಾ ದೇವಸ್ಥಾನದ ರಸ್ತೆಯಲ್ಲಿ 3 ಬೆಡ್‌ರೂಂ ಇರುವ ಕಮರ್ಷಿಯಲ್ ಉದ್ದೇಶಕ್ಕೆ, ಕ್ಲಿನೀಕ್, ಬ್ಯಾಂಕ್, ಆಫೀಸ್ ಇತರೆ ಆಫೀಸ್‌ಗಳಿಗೆ ಅನುಕೂಲವಾಗಿರುವ ಮನೆ ಲೀಸ್‌ಗೆ ಅಥವಾ ಬಾಡಿಗೆಗೆ ಇದೆ. ಸಂಪರ್ಕಿಸಿ
**98442 59343**
**99869 46030**

NGO-ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ
**MEGHANA ASSOCIATES (R)**
**99809 16126**

**ಬಾಡಿಗೆಗೆ ಇದೆ**
3 ಫ್ಲೋರ್ ವಾಣಿಜ್ಯ ಕಟ್ಟಡ, ಗ್ರೌಂಡ್ ಫ್ಲೋರ್ 3BHK, 1st ಫ್ಲೋರ್ 3BHK 2nd ಫ್ಲೋರ್ 3BHK ಹಾಸ್ಪಿಟಲ್, ಆಫೀಸ್, ಪಾರ್ಲರ್ ಮತ್ತು ಇತರೆ ವ್ಯವಹಾರಗಳಿಗೆ ಲಭ್ಯ. ಶಾಮನೂರು ಮುಖ್ಯ ರಸ್ತೆ, ದಾವಣಗೆರೆ.
**ಫೋ. : 95388 96927**

**ಮನೆ ಕಟ್ಟುವವರಿಗೆ ಸಿಹಿ ಸುದ್ದಿ**
ಸಂಕ್ರಾಂತಿವರೆಗೆ ಬಿಲ್ಡಿಂಗ್ ಪ್ಲಾನ್ಸ್ ಉಚಿತವಾಗಿ ಕೊಡಲಾಗುವುದು. (T&C)
**ಕಲ್ಪತರು ಕನ್‌ಸ್ಟ್ರಕ್ಷನ್, ದಾವಣಗೆರೆ.**
ಇಂಜಿನಿಯರ್ ಮತ್ತು ಕಾಂಟ್ರ್ಯಾಕ್ಟರ್ಸ್
**ಮೊ. : 98455 83340**

**ಮಾರಾಟಕ್ಕಿದೆ**
ಹೊಸದಾಗಿ ಮೆಡಿಕಲ್ ಶಾಪ್‌ಗೆ ಮಾಡಿಸಿದ ಪ್ಲೇವುಡ್‌ನ ಗ್ಲಾಸ್ ಸೆಲ್ಫ್‌ನ ರ್ಯಾಕ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
**97434 47076, 70192 49897**

**ಮನೆ ಮಾರಾಟಕ್ಕಿದೆ**
30x40 and 20x30 ಮನೆ ಮಾರಾಟಕ್ಕಿದೆ, ಎಸ್.ಎಸ್. ಹಾಸ್ಪಿಟಲ್ ಹಿಂಭಾಗ, ಸಿದ್ಧಗಂಗಾ ಬಡಾವಣೆ, ದಾವಣಗೆರೆ.
**ಫೋ. : 97388 79753**

GST Registration- Returns Filing INCOME TAX & GST CASE, Project Reports and for Accounts Maintenances Contact
**MEGHANA ASSOCIATES (R)**
**99809 16126**

**WANTED**
**WORKING PHARMACIST**
Qualification : D. Pharma/B. Pharma, Age Below 30 Years, Salary Scale : Rs.12000 to 16000
**ಕಾವೇರಿ ಮೆಡಿಹೌಸ್ ಪ್ರೈ. ಲಿ.,**
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-2.


## ಸವಿನೆನಪು



**ಲಿಂ॥ ಶ್ರೀ ಕೊಂಡಜ್ಜಿ ಗೌಡ್ರ ಬಸಪ್ಪ**
ನಿವೃತ್ತ ಶಿಕ್ಷಕರು
ನಿಧನ : 08.01.2018

**ಲಿಂ॥ ಶ್ರೀಮತಿ ಬಿ. ಸುಶೀಲಮ್ಮ**
ನಿವೃತ್ತ ಶಿಕ್ಷಕರು
ನಿಧನ : 13.12.2010

**ಒಡಲಿದೋ ಒಲವಿನ ಒರತೆ.... ಕಂಗಳೋ ಕರುಣೆಯ ಕಡಲು....**
**ಮಾತೃ ದೇವೋ ಭವ.... ಪಿತೃ ದೇವೋ ಭವ....**
**ನೀವು ನಮ್ಮನ್ನಗಲಿ ದೂರವಾಗಿದ್ದರೂ, ನೀವು ನಮಗೆ ಕಲಿಸಿದ ಜೀವನದ ಪಾಠ, ಆದರ್ಶದ ನಡೆ-ನುಡಿ, ಸಹಬಾಳ್ವೆ, ಮಮತೆಯ ಜೀವನದ ಪಥದಲ್ಲಿ ಸಾಗುವುದಕ್ಕೆ ನಿಮ್ಮ ನೆನಪೇ ನಮಗೆಲ್ಲಾ ಶ್ರೀ ರಕ್ಷೆ...... ನಿಮ್ಮ ಪ್ರೀತಿಯ...**

ಪುತ್ರರು : **ಕೆ.ಜಿ. ಶಿವಕುಮಾರ್,** ಮಾಜಿ ಸದಸ್ಯರು, ಮಹಾನಗರಪಾಲಿಕೆ, ಮಾಜಿ ಅಧ್ಯಕ್ಷರು, ನಗರಸಭೆ.
**ಜಿ.ಬಿ. ಲಿಂಗರಾಜ್,** ಮಾಜಿ ಅಧ್ಯಕ್ಷರು, ಸ್ಥಾಯಿ ಸಮಿತಿ, ಮಹಾನಗರಪಾಲಿಕೆ.
**ಜಿ.ಬಿ. ಸುರೇಶ್‌ಕುಮಾರ್** Architectural and Structural Consultant, ಸುಶೀಲ್ ಅಸೋಸಿಯೇಟ್ಸ್
ಪುತ್ರಿಯರು-ಅಳಿಯಂದಿರು :
**ಶ್ರೀಮತಿ ಕೆ.ಜಿ. ಸುವರ್ಣಮ್ಮ ಶ್ರೀ ಬಿ. ವಾಮದೇವಪ್ಪ, ಅಸಗೋಡು.**
**ಶ್ರೀಮತಿ ಜಿ.ಬಿ. ಪಾರ್ವತಮ್ಮ, ಶ್ರೀ ಎನ್.ಎಸ್. ಜಯಪ್ಪ, ತಾಳ್ಯ.**
**ಶ್ರೀಮತಿ ಜಿ.ಬಿ. ಮಂಜುಳಾ, ಶ್ರೀ ಕೆ.ಎಸ್. ಉಮೇಶಪ್ಪ, ಶೆಟ್ಟಿಹಳ್ಳಿ.**
ಸೊಸೆಯಂದಿರು : **ಶ್ರೀಮತಿ ಜಿ.ಪಿ. ಚಂದ್ರಿಕಾ,**
**ಶ್ರೀಮತಿ ವಿಜಯ ಲಿಂಗರಾಜು,** ಮಾಜಿ ಸದಸ್ಯರು, ನಗರಸಭೆ, ದಾವಣಗೆರೆ,
**ಶ್ರೀಮತಿ ಎಂ.ಬಿ. ತಾರಾ,** ಸಿವಿಲ್ ಇಂಜಿನಿಯರ್ ಮತ್ತು **ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಬೆಳ್ಳೂಡಿ ಹಾಗೂ ಕೊಂಡಜ್ಜಿ ಗೌಡ್ರು ವಂಶಸ್ಥರು ಹಾಗೂ ಬಂಧು-ಮಿತ್ರರು.**


**ಬಾಡಿಗೆ/ ಲೀಸ್‌ಗೆ**
2 ಬೆಡ್‌ರೂಂ, ಅಟ್ಯಾಚ್ ಬಾತ್‌ರೂಂವುಳ್ಳ 4 ಮನೆಗಳು ಕುಂದುವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಲಭ್ಯವಿರುತ್ತವೆ.
**(ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ)**
**96388 17967**
**73380 43912**

**ನೀರಿನ ಲೀಕೇಜ್**
**(ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**ಮೊ. 9538777582**
ಕೆಲಸ 100% ಗ್ಯಾರಂಟಿ.

**Dog Boarding**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ, ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
**ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.**
**98444 92134**


**ಎಲ್ಲ ಸಮಸ್ಯೆಗಳಿಗೆ ಗ್ಯಾರಂಟಿ ಪರಿಹಾರ.**
ದಾವಣಗೆರೆ
ಮೊ. 8133933804


॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ನಗರ ಡಿಸಿಎಂ ಟೌನ್‌ಶಿಪ್ ವಾಸಿ
**ಶ್ರೀಮತಿ ಗೌರಮ್ಮ ವಿಭೂತಿ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 04.01.2022ನೇ ಮಂಗಳವಾರ ಸಂಜೆ 6.45 ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಸುಭಾಷ್‌ಚಂದ್ರ ವಿಭೂತಿ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
**ದಿನಾಂಕ 08.01.2022ನೇ ಶನಿವಾರ ಬೆಳಿಗ್ಗೆ 10.00ಕ್ಕೆ ಮೃತರ ಸ್ವಗೃಹ ಡಿಸಿಎಂ. ಟೌನ್‌ಶಿಪ್, ದಾವಣಗೆರೆಯಲ್ಲಿ** ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
**ಶ್ರೀಮತಿ ಗೌರಮ್ಮ ಅಕ್ಕಿ ಮತ್ತು ಮೊಮ್ಮಕ್ಕಳು**
**ಶ್ರೀಮತಿ ಸೀಮಾ ಮತ್ತು ಶ್ರೀ ಸುಶೀಲ್, ಟೊರೊಂಟೊ, ಕೆನಡಾ**
**ಶ್ರೀಮತಿ ಶೀಲಾ ಮತ್ತು ಶ್ರೀ ವೀರಭದ್ರ, ಬೆಂಗಳೂರು**
**ಶ್ರೀಮತಿ ನೇತ್ರಾ ಮತ್ತು ಶ್ರೀ ಶಿವರಾಜ್ ಎಸ್. ವಿಭೂತಿ, ಬೆಂಗಳೂರು**
**ಅಕ್ಕಿ ವಂಶಸ್ಥರು ಹಾಗೂ ಅಪಾರ ಬಂಧು-ಮಿತ್ರರು.**

# ರಾಜ್ಯದಲ್ಲಿ ಲಾಕ್‌ಡೌನ್ ಹೇರಿಕೆ ಇಲ್ಲ

**(1ನೇ ಪುಟದಿಂದ)** ಮುನ್ನೆಚ್ಚರಿಕೆಯಿಂದ ಇರಬೇಕು ಎಂದು ತಿಳಿಸಿದರು.

ಒಟ್ಟಾರೆ ಸೋಂಕು ತಡೆಗಟ್ಟಲು ಎಲ್ಲರೂ ಎರಡು ಡೋಸ್ ಲಸಿಕೆ ಪಡೆದುಕೊಳ್ಳಬೇಕು. ಲಸಿಕೆ ಪಡೆದವರಿಗೆ ಗ್ರೀನ್ ಪಾಸ್ ಇಲ್ಲವೇ ಯುನಿವರ್ಸಲ್ ಪಾಸ್ ವಿತರಿಸಲಾ ಗುವುದು. ಇದರಿಂದ ಸೋಂಕು ನಿಯಂತ್ರಣ ಸಾಧ್ಯ ಎಂದರು.

ಈ ಕಾರ್ಡ್ ಹೊಂದಿರುವವರು ಎಲ್ಲೆಡೆ ಪ್ರವೇಶ ಮತ್ತು ಸಂಚರಿಸಲು ಅವಕಾಶವಿರುತ್ತದೆ. ಲಸಿಕೆ ಪಡೆಯದವರಿಗೆ ಈ ಗುರುತಿನ ಚೀಟಿ ಲಭ್ಯವಿರುವುದಿಲ್ಲ. ಅಂತಹವರಿಗೆ ಪ್ರವೇಶ ನಿಷೇಧ. ಇಂತಹವರ ಪ್ರವೇಶ ನಿಷೇಧ ಮಾಡುವುದರಿಂದ ಸೋಂಕಿಗೆ ಕಡಿವಾಣ ಹಾಕಬಹುದು. ಈ ಗ್ರೀನ್ ಪಾಸನ್ನು ಸಿದ್ದಪಡಿಸಲು ಐ.ಟಿ. ಸಂಸ್ಥೆಗಳೊಟ್ಟಿಗೆ ಚರ್ಚೆ ನಡೆದಿದೆ. ಅಷ್ಟೇ ಅಲ್ಲದೇ ತಾಂತ್ರಿಕ ಸಮಿತಿಯು ಕೆಲವು ಸಲಹೆ ಸೂಚನೆಗಳನ್ನು ನೀಡಿದ್ದು, ಅದರಂತೆ ಈ ಪಾಸ್‌ಗಳನ್ನು ಸಿದ್ದಪಡಿಸಿ, ಎರಡು ಡೋಸ್ ಲಸಿಕೆ ಪಡೆದವರಿಗೆ ವಿತರಿಸಲಾಗುತ್ತಿದೆ ಎಂದರು.

## ರಾಜ್ಯಾದ್ಯಂತ ವಾರಾಂತ್ಯದ ಕರ್ಫ್ಯೂ ಆರಂಭ

**(1ನೇ ಪುಟದಿಂದ)** ಕರ್ಫ್ಯೂ ಹೇರಿರುವ ಹಿನ್ನೆಲೆಯಲ್ಲಿ ಸರ್ಕಾರಿ, ಅನುದಾನಿತ, ಮತ್ತು ಅನುದಾನ ರಹಿತ ಶಾಲಾ-ಕಾಲೇಜು ನಡೆಸದಿರಲು ಸೂಕ್ತ ಕ್ರಮ ವಹಿಸುವಂತೆ ಆಯಾ ಜಿಲ್ಲೆಗಳ ಉಪನಿರ್ದೇಶಕರಿಗೆ ಸೂಚಿಸಲಾಗಿದೆ.

ಕರ್ಫ್ಯೂ ಸಂದರ್ಭದಲ್ಲಿ ಆಹಾರ ಧಾನ್ಯ, ಹಾಲು, ದಿನಸಿ,ಹಣ್ಣು, ತರಕಾರಿ, ಮಾಂಸ, ಮೀನು, ಡೈರಿ ಉತ್ಪನ್ನ ಮಾರಾಟಕ್ಕೆ ಅವಕಾಶ. ಬೀದಿಬದಿ ವ್ಯಾಪಾರ, ನ್ಯಾಯಬೆಲೆ ಅಂಗಡಿ ಎಂದಿನಂತೆ ಕಾರ್ಯನಿರ್ವಹಿಸಲಿವೆ. ಎಲ್ಲಾ ಸಾರ್ವಜನಿಕ ಉದ್ಯಾನವನಗಳನ್ನು ಬಂದ್ ಮಾಡಲಾಗಿದೆ. ಐ.ಟಿ. ಸೇರಿದಂತೆ ಎಲ್ಲ ಬಗೆಯ ಕೈಗಾರಿಕೆಗಳ ಕಾರ್ಯನಿರ್ವಹಣೆಗೆ ಅವಕಾಶ ಕೊಟ್ಟಿರುವುದರಿಂದ ನೌಕರರು ಗುರುತಿನ ಚೀಟಿ ಇಟ್ಟುಕೊಂಡು ಓಡಾಟ ಮಾಡಬಹುದು.

ರೋಗಿಗಳು ಹಾಗೂ ಸಹಾಯಕರು ಕನಿಷ್ಠ ದಾಖಲೆ ಪ್ರದರ್ಶಿಸಿ, ಸಂಚರಿಸಬಹುದು. ಚಿತ್ರಮಂದಿರ, ಮಾಲ್, ವಾಣಿಜ್ಯ ಮಳಿಗೆಗಳು, ವಾಹನ ಸರ್ವೀಸ್ ಸೆಂಟರ್, ಈಜುಕೊಳ, ಜಿಮ್, ಪಬ್, ಕ್ಲಬ್, ಬಾರ್ ಅಂಡ್ ರೆಸ್ಟೋರೆಂಟ್, ಗ್ರಂಥಾಲಯ ತೆರೆಯುವುದಿಲ್ಲ.

ಈ ಅತ್ಯಗತ್ಯ ಓಡಾಟವನ್ನು ಹೊರತುಪಡಿಸಿ, ಅನಗತ್ಯವಾಗಿ ಓಡಾಟ ನಡೆಸಿದರೆ, ವಾಹನಗಳು ಸೀಜ್ ಆಗಲಿವೆ.

## ಒತ್ತಡದಿಂದ ಆಸ್ಪತ್ರೆಗೆ ದಾಖಲಿಸಿಕೊಂಡರೆ ಕ್ರಮ

**(1ನೇ ಪುಟದಿಂದ)** ವಿಐಪಿಗಳ ಒತ್ತಡಕ್ಕೆ ಮಣಿದು, ಆಸ್ಪತ್ರೆಗೆ ದಾಖಲು ಮಾಡಿಕೊಂಡರೆ, ಅಂತಹ ಆಡಳಿತ ಮಂಡಳಿ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಸುಧಾಕರ್ ಎಚ್ಚರಿಕೆ ನೀಡಿದರು.

ಹಾಸಿಗೆಗಳ ಹಂಚಿಕೆಯು ಪಾರದರ್ಶಕವಾಗಿರುತ್ತದೆ. ತೀವ್ರ ಸೋಂಕಿಗೆ ಒಳಪಟ್ಟವರು ಸರಳವಾಗಿ ತಮ್ಮ ಮನೆಯ ಸಮೀಪದ ಆಸ್ಪತ್ರೆಗಳಿಗೆ ದಾಖಲಾಗಿಸಲು ಅವಕಾಶ ಮಾಡಿಕೊಡುವ ಭರವಸೆಯಿತ್ತರು.

# ಅಲೆ ಏರಿದಂತೆ ಸಾವುಗಳ ಇಳಿಕೆ

**(1ನೇ ಪುಟದಿಂದ)** ಡಿ.2ರಂದು ಸಾವುಗಳ ಪ್ರಮಾಣ 11 ಇದ್ದದ್ದು, ಜನವರಿ 6ಕ್ಕೆ 13ಕ್ಕೆ ಏರಿಕೆಯಾಗಿದೆ. ವಾರದ ಸರಾಸರಿ ಪ್ರಕರಣಗಳ ಸಂಖ್ಯೆ ಇದೇ ಅವಧಿಯಲ್ಲಿ 667 ರಿಂದ 8,387ಕ್ಕೆ ಏರಿಕೆ ಕಂಡಿದೆ.

ಓಮಿಕ್ರಾನ್ ಮೊದಲು ಕಂಡು ಬಂದ ದಕ್ಷಿಣ ಆಫ್ರಿಕಾದಲ್ಲಿ ಸಾವು ಹಾಗೂ ಕೊರೊನಾ ಪ್ರಕರಣಗಳು ತದ್ವಿರುದ್ಧ ದಿಕ್ಕಿನಲ್ಲಿ ಸಾಗಿದ್ದು ಕಂಡು ಬರುತ್ತಿದೆ. ನವೆಂಬರ್ 24ರಂದು ಮೊದಲು ಓಮಿಕ್ರಾನ್ ಗುರುತಿಸಿದಾಗ ದೇಶದಲ್ಲಿ ಸರಾಸರಿ ವಾರದ ಪ್ರಕರಣಗಳು 3,303 ಹಾಗೂ ಸಾವು 20ರಷ್ಟಿತ್ತು.

ಡಿಸೆಂಬರ್ 17ರಂದು ಸರಾಸರಿ ಪ್ರಕರಣಗಳು 23,437ಕ್ಕೆ ಅತಿ ಹೆಚ್ಚಿನ ಹಂತ ತಲುಪಿದ್ದವು. ಆಗ ಸಾವಿನ ಪ್ರಕರಣಗಳು ಸರಾಸರಿ 31ಕ್ಕೆ ಇಳಿಕೆಯಾಗಿದ್ದವು.

ಆಸಕ್ತಿಕರ ಅಂಶವೆಂದರೆ ಕಳೆದ ಜನವರಿ 6ರಂದು ವಾರದ ಸರಾಸರಿ ಪ್ರಕರಣಗಳ ಸಂಖ್ಯೆ 8,289ಕ್ಕೆ ಇಳಿಕೆಯಾಗಿದ್ದರೆ, ಸಾವಿನ ಪ್ರಮಾಣ 150ಕ್ಕೆ ಏರಿಕೆಯಾಗಿದೆ!

ಇಡೀ ವಿಶ್ವದಲ್ಲೂ ಕೊರೊನಾ ಏರಿಕೆಯಾದಂತೆ ಸಾವಿನ ಪ್ರಮಾಣ ಇಳಿಕೆಯಾಗುತ್ತಿದೆ. ಕಳೆದ ನವೆಂಬರ್ 25ರಂದು ವಿಶ್ವದಾದ್ಯಂತ ಕೊರೊನಾ ಸೋಂಕು ಕಂಡು ಬರುವ ವಾರದ ಸರಾಸರಿ ಪ್ರಮಾಣ 5.65 ಲಕ್ಷ ಹಾಗೂ ಸಾವಿನ ಪ್ರಮಾಣ 7,208 ರಷ್ಟಿತ್ತು. ಜನವರಿ 6ರಂದು ವಾರದ ಸರಾಸರಿ ಕೊರೊನಾ ಪ್ರಕರಣಗಳ ಸಂಖ್ಯೆ 19.72 ಲಕ್ಷಕ್ಕೆ ತಲುಪಿದ್ದರೆ, ಸಾವಿನ ಪ್ರಮಾಣ 5,920ಕ್ಕೆ ಇಳಿಕೆಯಾಗಿದೆ.

ಕೊರೊನಾ ಅಲೆಯ ಈ ಹಿಂದಿನ ಸಂದರ್ಭಗಳಲ್ಲೂ ಸಾವು ಹಾಗೂ ಸೋಂಕು ಒಮ್ಮೆಲೇ ಏರಿಕೆಯಾಗಿರಲಿಲ್ಲ. ಪ್ರಕರಣಗಳ ಸಂಖ್ಯೆ ಉತ್ತುಂಗ ಕ್ಕೇರಿ ಇಳಿಕೆಯಾಗುವ ಹೊತ್ತಿನಲ್ಲಿ ಸಾವಿನ ಸಂಖ್ಯೆ ಸ್ಪಷ್ಟವಾಗುತ್ತಿತ್ತು. ಹೀಗಾಗಿ ಓಮಿಕ್ರಾನ್ ಏರಿದಂತೆ ಸಾವು ಇಳಿಕೆ ಎಂದು ಈಗಲೇ ಷರಾ ಬರೆಯಲಾಗದು. ಆದರೆ, ಹಿಂದಿನ ಅಲೆಗಳಿಗೆ ಹೋಲಿಸಿದರೆ ಜನರು ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗುವುದು ಕಡಿಮೆ ಇದೆ. ಹೀಗಾಗಿ ಹಿಂದಿನ ಅಲೆಗಳಿಗಿಂತ ಓಮಿಕ್ರಾನ್ ಭಿನ್ನವಾಗಿದೆ ಎಂದು ಮಾತ್ರ ಸ್ಪಷ್ಟವಾಗಿ ಹೇಳಬಹುದು.

# 12 ಅಡಿಯ ಅಂಬೇಡ್ಕರ್ ಪುತ್ಥಳಿ

**(1ನೇ ಪುಟದಿಂದ)** ನಿರ್ಮಿಸುವ ಕಾಮಗಾರಿ ನಡೆಸಲಾಗುವುದು. ಎಲ್ಲಾ ಕಡೆಗಳಲ್ಲಿ ಅಂಬೇಡ್ಕರ್ ಅವರ ಪ್ರತಿಮೆ ದೊಡ್ಡಾಗಿದೆ. ಆದರೆ, ನಗರದಲ್ಲಿ ಇರಲಿಲ್ಲ. ಈಗ ಶಾಸಕರೆಲ್ಲರೂ ಸೇರಿಕೊಂಡು ದೊಡ್ಡ ಪ್ರತಿಮೆ ನಿರ್ಮಾಣ ಮಾಡಲು ನಿರ್ಧಾರ ಮಾಡಿದ್ದೇವೆ ಎಂದು ಹೇಳಿದರು.

ನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಅವರ ಪ್ರತಿಮೆ ಸ್ಥಾಪನೆ ಮಾಡಬೇಕು ಎಂದು ಮಹಾಪೌರನಾಗಿ ಆಯ್ಕೆಗೊಂಡಾಗಿನಿಂದ ನಿರ್ಧಾರ ಮಾಡಿದ್ದೆ. ಅಲ್ಲದೇ ನಾವುಗಳು ಸೇರಿದಂತೆ ದಲಿತ ಸಂಘಟನೆಗಳ ಮುಖಂಡರು ಹೋರಾಟಗಳನ್ನು ಮಾಡಿದ್ದೆವು. ಅದರ ಪ್ರತಿಫಲವಾಗಿ ಇಂದು ಭೂಮಿ ಪೂಜೆ ಮುಖೇನ ಕನಸು ಕೈಗೂಡಿದಂತಾಗಿದೆ. ಅಂಬೇಡ್ಕರ್ ನೂತನ ಪುತ್ಥಳಿ ಸ್ಥಾಪನೆ ಅಲ್ಲದೇ, ಇಡೀ ವೃತ್ತವನ್ನು ನವೀಕರಣಗೊಳಿಸಲು ಸುಮಾರು 24 ಲಕ್ಷ ರೂ.ಗಳ ಯೋಜನೆ ರೂಪಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಮಾಜಿ ಮೇಯರ್ ಅಜಯ್‌ಕುಮಾರ್, ಪಾಲಿಕೆ ಸದಸ್ಯರಾದ ಕೆ. ಪ್ರಸನ್ನ ಕುಮಾರ್, ಕೆ.ಎಂ. ವೀರೇಶ್, ಎಂ. ಹಾಲೇಶ್, ಪಾಲಿಕೆ ವಿರೋಧ ಪಕ್ಷ ನಾಯಕ ಎ. ನಾಗರಾಜ್, ಅಬ್ದುಲ್ ಲತೀಫ್, ದಲಿತ ಸಂಘಟನೆಗಳ ಮತ್ತು ಸಮಾಜದ ಮುಖಂಡರಾದ ಎಲ್.ಎಂ. ಹನುಮಂತಪ್ಪ, ಆಲೂರು ನಿಂಗರಾಜ್, ಕುಂದುವಾಡ ಮಂಜುನಾಥ್, ಹೆಚ್. ಮಲ್ಲೇಶ್, ಸೋಮ್ಲಾಪುರ ಹನುಮಂತಪ್ಪ ಸೇರಿದಂತೆ ಇತರರು ಇದ್ದರು.

### ಬಿಜೆಪಿ ಅಂಬೇಡ್ಕರ್ ವಿರೋಧಿ ಎಂದು ಬಿಂಬಿಸುವುದು ಸಲ್ಲ

" ನಾನು ಅಂಬೇಡ್ಕರ್ ಶಿಷ್ಯ. ನಾನು ಅವರ ಪುಸ್ತಕ ಓದಿ ಬೆಳೆದವನು. ನಾನಾಗಲೀ ಅಥವಾ ಬಿಜೆಪಿ ನಾಯಕರಾಗಲೀ ಅಂಬೇಡ್ಕರ್ ವಿರೋಧಿಗಳು ಅಲ್ಲ. ಅಧಿಕಾರ ಬಂದಾಗಿನಿಂದಲೂ ನಾವು ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಗೌರವಿಸುತ್ತಲೇ ಬಂದಿದ್ದೇವೆ. ದೇಶದಲ್ಲಿ ಅಂಬೇಡ್ಕರ್ ಅವರಿಗೆ ಅತೀ ಹೆಚ್ಚು ಗೌರವ ಸೂಚಿಸಿದ್ದು ಬಿಜೆಪಿ. ನರೇಂದ್ರ ಮೋದಿಯವರು ಅಂಬೇಡ್ಕರ್ ಮ್ಯೂಸಿಯಂ ನಿರ್ಮಾಣ ಮಾಡಿದ್ದಾರೆ. ಅವರ ಜನ್ಮಸ್ಥಳ ಅಭಿವೃದ್ಧಿ ಮಾಡಿದ್ದಾರೆ. ದಾವಣಗೆರೆಯಲ್ಲಿ ಕಂಚಿನ ಪ್ರತಿಮೆ ನಿರ್ಮಾಣ ಮಾಡುತ್ತಿದ್ದೇವೆ. ಬಿಜೆಪಿಯವರು ಅಂಬೇಡ್ಕರ್ ವಿರೋಧಿಗಳು ಎಂದು ಕೆಲವರು ಬಿಂಬಿಸುತ್ತಾರೆ.

**- ಜಿ.ಎಂ. ಸಿದ್ದೇಶ್ವರ, ಸಂಸದ**

## ಮೀಸಲಾತಿಗೆ ಅನುಮತಿ

**(1ನೇ ಪುಟದಿಂದ)** ಅವರನ್ನು ಒಳಗೊಂಡ ಪೀಠ, ಆರ್ಥಿಕ ಮೀಸಲಾತಿಯ 8 ಲಕ್ಷ ರೂ.ಗಳ ಮಿತಿಯನ್ನು ಪರಿಶೀಲಿಸಿತ್ತು. ಮಧ್ಯಂತರ ಆದೇಶ ಹೊರಡಿಸಿರುವ ನ್ಯಾಯಾಲಯ, 8 ಲಕ್ಷ ರೂ.ಗಳ ಮಿತಿಯನ್ನು ಮುಂದುವರೆಸಿದೆ.

ನೀಟ್ - ಪಿ.ಜಿ.ಗಾಗಿ ಶೇ.27ರ ಒ.ಬಿಸಿ. ಹಾಗೂ ಶೇ.10ರ ಆರ್ಥಿಕ ಮೀಸಲಾತಿ ಕಲ್ಪಿಸಿರುವುದನ್ನು ಪ್ರಶ್ನಿಸಿ ಜುಲೈ 29, 2021ರಲ್ಲಿ ವೈದ್ಯರು ಅರ್ಜಿಗಳನ್ನು ದಾಖಲಿಸಿದ್ದರು.

ಈ ಬಗ್ಗೆ ನ್ಯಾಯಾಲಯ ಮಧ್ಯಂತರ ಆದೇಶ ಹೊರಡಿಸಿ ಆರ್ಥಿಕ ಮೀಸಲಾತಿಗೆ ಅನುಮತಿ ನೀಡಿದೆ. ಆದರೆ, ಅಂತಿಮ ಆದೇಶಕ್ಕೆ ಮೀಸಲಾತಿ ಮಾನದಂಡ ಬದ್ಧವಾಗಿರಲಿದೆ ಎಂದು ತಿಳಿಸಿದೆ.ಪ್ರತಿ ವರ್ಷ 45 ಸಾವಿರ ಪಿ.ಜಿ. ವೈದ್ಯರು ನೀಟ್ - ಪಿ.ಜಿ. ಮೂಲಕ ಆಯ್ಕೆಯಾಗುತ್ತಾರೆ. ಕೌನ್ಸೆಲಿಂಗ್ ತಡವಾದ ಕಾರಣ 2021ರಲ್ಲಿ ಯಾವುದೇ ಕಿರಿಯ ವೈದ್ಯರು ಪಿ.ಜಿ.ಗೆ ಸೇರ್ಪಡೆಯಾಗಿರಲಿಲ್ಲ.


## ಪಂಜಾಬ್ ಸರ್ಕಾರ ವಜಾಕ್ಕೆ ಸಂಸದ ಸಿದ್ದೇಶ್ವರ ಆಗ್ರಹ

ದಾವಣಗೆರೆ, ಜ.7- ಪಂಜಾಬ್‌ನಲ್ಲಿ ಪ್ರಧಾನಿ ಮೋದಿ ಅವರಿಗೆ ಭದ್ರತಾ ಲೋಪದ ಆರೋಪ ಹಿನ್ನೆಲೆಯಲ್ಲಿ ಪಂಜಾಬ್ ಸರ್ಕಾರವನ್ನು ವಜಾ ಮಾಡಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಆಗ್ರಹಿಸಿದ್ದಾರೆ.

## ರಾಜನಹಳ್ಳಿಯಲ್ಲಿ ಇಂದು ಸಭೆ

ವಾಲ್ಮೀಕಿ ಗುರುಪೀಠದಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಶ್ರೀ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸತೀಶ್ ಜಾರಕಿಹೊಳಿ ನೇತೃತ್ವದಲ್ಲಿ ವಾಲ್ಮೀಕಿ ನಾಯಕ ಸಮಾಜದ ಸಭೆ ಕರೆಯಲಾಗಿದೆ ಎಂದು ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ ತಿಳಿಸಿದ್ದಾರೆ.

# ಹರಪನಹಳ್ಳಿ : ಅನುಮಾನಾಸ್ಪದವಾಗಿ ಚಿರತೆ ಸಾವು



ಹರಪನಹಳ್ಳಿ, ಜ.7- ಅನುಮಾನಾಸ್ಪದವಾಗಿ ಹೆಣ್ಣು ಚಿರತೆಯೊಂದು ಸಾವನ್ನಪ್ಪಿದ ಘಟನೆ ತಾಲ್ಲೂಕಿನ ಕರಡಿದುರ್ಗದ ಖಾಸಗಿ ಜಮೀನಿನಲ್ಲಿ ಗುರುವಾರ ರಾತ್ರಿ ಜರುಗಿದೆ.

ಕರಡಿದುರ್ಗದ ಬಳಿ ಉಳುಮೆ ಮಾಡದ ಜಮೀನಿನಲ್ಲಿ 2 ವರ್ಷದ ಹೆಣ್ಣು ಚಿರತೆಯೊಂದು ಅನುಮಾನಾಸ್ಪದ ಸಾವನ್ನಪ್ಪಿದ್ದು, ಚಿರತೆ ಶವ ಪತ್ತೆಯಾಗಿದೆ.

ಈ ಕುರಿತು ಮಾಹಿತಿ ನೀಡಿದ ಇಲ್ಲಿನ ವಲಯ ಅರಣ್ಯಾಧಿಕಾರಿ ಭರತ್ ಅವರು ಈ ಕುರಿತು ಹರಪನಹಳ್ಳಿ ನ್ಯಾಯಾಲಯಕ್ಕೆ ದೂರು ನೀಡಿದ ಹಿನ್ನೆಲೆಯಲ್ಲಿ ನ್ಯಾಯಾಲಯ ತನಿಖೆಗೆ ಅನುಮತಿ ನೀಡಿದೆ. ಉಚ್ಚಂಗಿದುರ್ಗ ವೈದ್ಯರು ಶವ ಪರೀಕ್ಷೆ ಮಾಡಿದ್ದಾರೆ.

ಮೃತ ಚಿರತೆಯನ್ನು ಅಗ್ನಿಸ್ಪರ್ಶ ಮಾಡಿ ವಿಡಿಯೋ ಸಮೇತ ಕೋರ್ಟ್‌ಗೆ ಮಾಹಿತಿ ಸಲ್ಲಿಸಿದ್ದೇವೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ಸಾವಿನ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

## ಪುಣ್ಯ ಸ್ಮರಣೆ





8.1.2018 (4ನೇ ವರ್ಷದ ಪುಣ್ಯಸ್ಮರಣೆ)
**ದಿ॥ ಶ್ರೀಮತಿ ಟಿ. ಅಮೃತಮ್ಮ**
26.1.2005 (17ನೇ ವರ್ಷದ ಪುಣ್ಯಸ್ಮರಣೆ)
**ದಿ॥ ಶ್ರೀಮತಿ ಹೇಮಕ್ಕ ತುಂಬಿಗಿ**
ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೆನಪಿನಲ್ಲಿರುವ
ಪತಿ : **ಕೆ.ಎಸ್. ನಟರಾಜ್**
ಮಕ್ಕಳು : **ಕೆ.ಎನ್. ಚೇತನ ಶಿವರಾಜ್**
**ಪಿ. ಧನ್ಯಕುಮಾರಿ, ಪಿ. ಅರ್ಚನ,**
**ಪರಮೇಶ್ವರಪ್ಪ ತುಂಬಿಗಿ,** ಮಹಾನಗರ ಪಾಲಿಕೆ, ದಾವಣಗೆರೆ.

## ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ವಿದ್ಯುತ್ ವ್ಯತ್ಯಯ

ದಾವಣಗೆರೆ, ಜ.7 - ಜಗಳೂರು ಉಪ ವಿಭಾಗ 66/11 ಕೆ.ವಿ. ಹಿರೇಮಲ್ಲನಹೊಳೆ ವಿದ್ಯುತ್ ಮಾರ್ಗದ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ನಿಮಿತ್ಯ ಹಿರೇಮಲ್ಲನಹೊಳೆ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳು, ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ಜ. 10 ರಂದು ಬೆಳಿಗ್ಗೆ 10 ರಿಂದ ಸಂಜೆ 05 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ಜನಪ್ರತಿನಿಧಿಗಳ ಗೌರವಕ್ಕೆ ಹಾನಿ

**(1ನೇ ಪುಟದಿಂದ)** ಚುನಾವಣೆಗೆ ನಾನು ನಿಲ್ಲುತ್ತೇನೆಯೋ, ಇಲ್ಲವೋ ಗೊತ್ತಿಲ್ಲ, ನಿಂತರೂ ಗೆಲ್ಲುತ್ತೇನೋ ಇಲ್ಲವೋ ಗೊತ್ತಿಲ್ಲ. ಹೀಗಿರುವಾಗ ತ್ವರಿತವಾಗಿ ಕಾಮಗಾರಿ ಮಾಡಿ ಎಂದವರು ತಾಕೀತು ಮಾಡಿದರು.

ಸಂಸದರ ಕ್ಷೇತ್ರಾಭಿವೃದ್ಧಿ ನಿಧಿ ಬಳಕೆಯಾಗದೇ ಹೋದರೆ, ಅದನ್ನು ವಾಪಸ್ ಪಡೆದು ಬೇರೆಯವರಿಗೆ ನೀಡಲಾಗುತ್ತದೆ. ಈ ರೀತಿ ಆಗಿ ತಮಗೆ 45 ಲಕ್ಷ ರೂ. ಅನುದಾನ ದೊರೆತಿದೆ. ಬಳಕೆ ಮಾಡಿಕೊಳ್ಳದಿದ್ದರೆ ತಮ್ಮ ಅನುದಾನ ಬೇರೆಯವರಿಗೆ ಹೋಗುತ್ತದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಬಸ್ ತಂಗುದಾಣಗಳನ್ನು ತಿಂಗಳಲ್ಲೇ ನಿರ್ಮಿಸಬಹುದು. ಇಂತಹ ಕಾಮಗಾರಿಗಳು ವಿಳಂಬವಾಗುತ್ತಿವೆ. ಕಾಮಗಾರಿಗಳು ಪೂರ್ಣಗೊಂಡಿದ್ದರೆ ತಹಶೀಲ್ದಾರರು ತ್ವರಿತವಾಗಿ ಆ ಬಗ್ಗೆ ವರದಿ ಸಲ್ಲಿಸಬೇಕು ಎಂದು ತಿಳಿಸಿದರು.

**ಆದರ್ಶ ಗ್ರಾಮಗಳು ಮಾದರಿಯಾಗಲಿ :** ಸಂಸದರ ಆದರ್ಶ ಗ್ರಾಮಗಳಿಗೆ ಆಯ್ಕೆಯಾಗಿರುವ ಜಗಳೂರು ತಾಲ್ಲೂಕಿನ ಮುಷ್ಟೂರು, ಚನ್ನಗಿರಿಯ ಮಲ್ಲಾಪುರ ಹಾಗೂ ಹೊನ್ನಾಳಿಯ ಸೊರಟೂರುಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸೌಲಭ್ಯಗಳನ್ನು ತಲುಪಿಸುವಂತೆ ಸಂಸದ ಸಿದ್ದೇಶ್ವರ ಸೂಚಿಸಿದ್ದಾರೆ.

ಸಂಸದರ ಆದರ್ಶ ಗ್ರಾಮದ ಅಭಿವೃದ್ಧಿಗಾಗಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯ್ತಿ ಸಿಇಒಗಳು ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಸಂಸದರ ಆದರ್ಶ ಗ್ರಾಮಗಳು ಮಾದರಿ ಗ್ರಾಮಗಳಾಗಬೇಕು ಎಂದವರು ಹೇಳಿದರು.

ಕೇಂದ್ರ ಹಾಗೂ ರಾಜ್ಯ ಎರಡೂ ಕಡೆ ನಮ್ಮದೇ ಸರ್ಕಾರ ಇದೆ. ಈ ಗ್ರಾಮಗಳ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಬೇಕು. ಮುದ್ರಾ, ಮಣ್ಣಿನ ಆರೋಗ್ಯ, ಫಸಲು ವಿಮೆ, ಉಜ್ವಲ, ಆಯುಷ್ಮಾನ್ ಭಾರತ್, ಜನ್ ಧನ್, ಜಲ ಜೀವನ್ ಮಿಷನ್, ವಸತಿ ಸೇರಿದಂತೆ ಎಲ್ಲ ಯೋಜನೆಗಳನ್ನು ಜಾರಿಗೆ ತರಬೇಕು ಎಂದವರು ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ್, ಆದರ್ಶ ಗ್ರಾಮಗಳಲ್ಲಿ 38 ಕೋಟಿ ರೂ.ಗಳ 194 ಯೋಜನೆಗಳಿಗೆ ಅನುಮತಿ ನೀಡಲಾಗಿದೆ. ಈ ಪೈಕಿ 35 ಕೋಟಿ ರೂ. ಮೊತ್ತದ 167 ಕಾಮಗಾರಿಗಳು ಜಾರಿಯಾಗಿವೆ. 22 ಕಾಮಗಾರಿಗಳು ಪ್ರಗತಿಯಲ್ಲಿದ್ದರೆ, ಐದು ಆರಂಭವಾಗಬೇಕಿದೆ ಎಂದರು.

ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ರವಿ, ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ವಿಜಯ್ ಕುಮಾರ್, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಗ್ರಾನೈಟ್ ಹಾಕಿದರೆ ಹೈಟೆಕ್

ಹರಿಹರ ತಾಲ್ಲೂಕಿನ ಅಮರಾವತಿ ಗ್ರಾಮದ ಬಳಿ ಹೈಟೆಕ್ ಬಸ್ ತಂಗುದಾಣ ಕಟ್ಟಡ ನಿರ್ಮಿಸಲಾಗುತ್ತಿರುವ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡುವಾಗ ಸಂಸದ ಜಿ.ಎಂ. ಸಿದ್ದೇಶ್ವರ ಅವರು 'ಹೈಟೆಕ್ ತಂಗುದಾಣ' ಎಂದರೆ ಏನು? ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಅಧಿಕಾರಿಗಳು ತಂಗುದಾಣಗಳಿಗೆ ಗ್ರಾನೈಟ್ ಇತ್ಯಾದಿ ಹಾಕುತ್ತೇವೆ. ಈ ರೀತಿಯ ತಂಗುದಾಣಗಳಿಗೆ ಹೈಟೆಕ್ ಎಂದು ಕರೆಯಲಾಗುತ್ತದೆ ಎಂದರು.

# ಆಶ್ರಯ ಮನೆಗಳ ಖಾತೆ, ಒತ್ತುವರಿ ಜಮೀನು ಹಂಚಿಕೆ



ಎಸ್ಸಿ-ಎಸ್ಟಿ ಹಿತರಕ್ಷಣಾ ಜಾಗೃತ ಸಭೆಯಲ್ಲಿ ಶಾಸಕ ರಾಮಪ್ಪ ಸೂಚನೆ

ಹರಿಹರ, ಜ. 7- ನಗರಸಭೆಯ ವತಿಯಿಂದ ಆಶ್ರಯ ಕಾಲೋನಿ ಮತ್ತು ಇತರೆ ಸ್ಲಂ ನಿವಾಸಿಗಳು ತಮ್ಮ ಹೆಸರಿನ ಹಕ್ಕು ಪತ್ರವನ್ನು ಬೇರೆಯವರ ಹೆಸರಿನವರಿಗೆ ಖಾತೆ ಮಾಡಲು ನಗರಸಭೆಗೆ 90 ಸಾವಿರ ರೂ. ಕಟ್ಟಲು ತಿಳಿಸುತ್ತಿರುವುದಕ್ಕೆ ಶಾಸಕ ಎಸ್. ರಾಮಪ್ಪ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಗರದ ತಾ.ಪಂ. ಕಚೇರಿಯ ಸಭಾಂಗಣದಲ್ಲಿ ತಾಲ್ಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದ ಹಿತರಕ್ಷಣಾ ಜಾಗೃತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಹಣ ಕಟ್ಟಿದ ನಂತರದಲ್ಲಿ ಖಾತೆ ಮಾಡಿಕೊಡುವುದಕ್ಕೆ ಬರುತ್ತದೆ ಎಂದು ನಿಮ್ಮಲ್ಲಿ ಯಾವ ಆದೇಶ ಪ್ರತಿ ಇದೆ? ಇದಕ್ಕೆ ದಾಖಲೆಗಳನ್ನು ನೀಡಿ, ಇಲ್ಲದೆ ಹೋದರೆ ನಿವಾಸಿಗಳ ಹೆಸರಿಗೆ ಖಾತೆಯನ್ನು ಮಾಡಿ ಎಂದು ರಾಮಪ್ಪ ಹೇಳಿದರು.

ನಗರದ ಆಶ್ರಯ ಬಡಾವಣೆಯ ಬಹುತೇಕ ಸಾರ್ವಜನಿಕರು ಹಿಂದೆ ಸರ್ಕಾರ ನಿಗದಿ ಮಾಡಿದ್ದ 5 ಸಾವಿರ ರೂಪಾಯಿ ಕೊಟ್ಟು ಹಕ್ಕುಪತ್ರವನ್ನು ಪಡೆದಿದ್ದಾರೆ. ನಂತರ ಅವರು ಮನೆಗಳನ್ನು ಮಾರಿದ್ದಾರೆ. ಈಗ ಇರುವವರಿಗೆ ಖಾತೆ ಮಾಡಿ ಎಂದರೆ ನೆಪ ಹೇಳುತ್ತಿದ್ದೀರಿ. ನಿಮ್ಮಲ್ಲಿ ಆದೇಶದ ಪ್ರತಿ ಇಲ್ಲದಿದ್ದರೆ ವಾರದಲ್ಲಿ ಆಶ್ರಯ ಬಡಾವಣೆ ನಿವಾಸಿಗಳಿಗೆ ಖಾತೆ ಮಾಡಿಕೊಡಿ ಎಂದು ಪೌರಾಯುಕ್ತರಿಗೆ ಶಾಸಕರು ತಿಳಿಸಿದರು.

ನಗರದ ದಲಿತ ಸಮುದಾಯದ ಬಹುದಿನಗಳ ಬೇಡಿಕೆಯಂತೆ ನಗರದ ಹಳೆ ನ್ಯಾಯಾಲಯದ ಸ್ಥಳದಲ್ಲಿ ಡಾ. ಅಂಬೇಡ್ಕರ್ ಭವನ ನಿರ್ಮಾಣ ಮಾಡಬೇಕು ಎಂದು ರಾಮಪ್ಪ ಸೂಚಿಸಿದರು.

ಮೈಸೂರು ಕಿರ್ಲೋಸ್ಕರ್ ಕಂಪನಿಯ ಸ್ಥಳದಲ್ಲಿ ಒತ್ತುವರಿ ಆಗಿರುವ 4 ಎಕರೆ 34 ಗುಂಟೆ ಜಮೀನನ್ನು ವಶಪಡಿಸಿಕೊಂಡು ಸ್ಥಳೀಯ ದಲಿತ ಸಮುದಾಯದ ಜನರಿಗೆ ಹಂಚಿಕೆ ಮಾಡಲು ಸೂಚನೆ ನೀಡಲಾಗಿದೆ. ಅಧಿಕಾರಿಗಳು ತ್ವರಿತ ಕ್ರಮ ತೆಗೆದುಕೊಳ್ಳಬೇಕು ಎಂದು ಶಾಸಕರು ಹೇಳಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ಕಂಪನಿಯ ಜಾಗದ ವಿಚಾರಕ್ಕೆ ಸಂಬಂಧಿಸಿದಂತೆ ಕೆಲವು ವ್ಯಕ್ತಿಗಳನ್ನು ಕರೆಸಿ ಮಾತನಾಡಲಾಗಿದೆ. ಅತಿ ಶೀಘ್ರದಲ್ಲಿ ಒತ್ತುವರೆ ಆಗಿರುವ ಸ್ಥಳವನ್ನು ತೆರವುಗೊಳಿಸುವ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿದರು.

ತಾ.ಪಂ ಇ.ಓ. ಗಂಗಾಧರನ್ ಮಾತನಾಡಿ, 873 ಮನೆಗಳ ಯೋಜನೆ ಮಂಜೂರಾಗಿದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಹಂಚಿಕೆ ಮಾಡಲಾಗುತ್ತದೆ ಎಂದು ಹೇಳಿದರು.

ಹೆಚ್. ನಿಜಗುಣ ಮಾತನಾಡಿ, ನಗರಸಭೆ ವತಿಯಿಂದ ಪೌರ ಕಾರ್ಮಿಕರಿಗೆ ವಿತರಣೆ ಮಾಡಿರುವ ಸೈಕಲ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದರು.

ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ಮಾತನಾಡಿ, ಪೌರ ಕಾರ್ಮಿಕರು ಗುಣಮಟ್ಟದ ಸೈಕಲ್ ಎಂದು ಹೇಳಿದ ನಂತರದಲ್ಲಿ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲಾಗಿದೆ ಎಂಬ ಆರೋಪ ತಳ್ಳಿ ಹಾಕಿದರು.

ಸಭೆಯಲ್ಲಿ ದಲಿತ ಮುಖಂಡ ಪಿ.ಜೆ. ಮಹಾಂತೇಶ್, ಸಂತೋಷ ನೋಟದರ, ಭಾನುವಳ್ಳಿ ಎ.ಕೆ. ಮಂಜಪ್ಪ, ನಿರಂಜನಮೂರ್ತಿ, ಜಿಗಳಿ ಪ್ರಕಾಶ್, ವಿಶ್ವನಾಥ್ ಮೈಲಾಳ, ರಾಜನಹಳ್ಳಿ ಮಂಜುನಾಥ್, ಹೆಚ್. ಸುಧಾಕರ, ಸುರೇಶ್ ಕುಣೆಬೆಳಕೆರೆ ಮಾತನಾಡಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳಾದ ಸಿಪಿಐ ಸತೀಶ್ ಕುಮಾರ್, ಬಿಇಓ ಬಿ.ಎಸ್. ಸಿದ್ದಪ್ಪ, ಡಾ ಚಂದ್ರಮೋಹನ್, ನಾರನಗೌಡ, ಲಕ್ಕಪ್ಪ, ಚಂದ್ರಕಾಂತ್, ಶೀಲಾ, ರೇಖಾ, ನಿರ್ಮಲ, ವಿದ್ಯಾ ಪರವಿನ್ ಬಾನು, ನಾಸೀರ್ ವುದ್ದೀನ್, ಲಿಂಗರಾಜ್, ವಿಜಯ ಮಹಾಂತೇಶ್, ದಲಿತ ಸಮಾಜದ ಮುಖಂಡರಾದ ಬಿ.ಎನ್. ರಮೇಶ್, ಹೆಚ್. ಮಲ್ಲೇಶ್, ಹನುಮಂತಪ್ಪ, ದೇವೇಂದ್ರಪ್ಪ, ಎಲ್.ಬಿ. ಹನುಮಂತಪ್ಪ, ಮಂಜುನಾಥ್ ರಾಜನಹಳ್ಳಿ, ವೈ ರಘುಪತಿ, ಮಂಜಪ್ಪ ಭಾನುವಳ್ಳಿ, ಗುರು, ಎಸ್ಸಿ ಸಮಾಜದ ಮುಖಂಡರಾದ ಜಿಗಳಿ ಆನಂದಪ್ಪ ಮತ್ತು ಇತರರು ಹಾಜರಿದ್ದರು.

### ವಿದ್ಯಾಭ್ಯಾಸ, ಆರೋಗ್ಯ ಸೇವೆಗಳಿಗೆ ಮನವಿ

ಎಸ್ಸಿ, ಎಸ್ಟಿ ಸಮುದಾಯದ ಹಿತರಕ್ಷಣಾ ಸಭೆಯಲ್ಲಿ ದಲಿತ ಸಮುದಾಯದ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಡೊನೇಷನ್ ಪಡೆಯದೆ ವಿದ್ಯಾಭ್ಯಾಸ ನೀಡಬೇಕು, ದಲಿತರ ಬಡಾವಣೆಗಳ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದಕ್ಕೆ ಕಡಿವಾಣ ಹಾಕಬೇಕು, ಆರೋಗ್ಯ ತಪಾಸಣೆ ಮತ್ತು ಆರೋಗ್ಯ ಶಿಬಿರಗಳನ್ನು ಆಯೋಜಿಸಬೇಕು ಎಂಬ ಹಲವಾರು ವಿಷಯಗಳ ಬಗ್ಗೆ ಶಾಸಕ ರಾಮಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

# ನಗರದ ವಿವಿಧೆಡೆಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳೀಮರ ಸರ್ಕಲ್, ನೂರಾನಿ ಆಟೋಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್‌ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸಾ ಮಸೀದಿ ಹಿಂಭಾಗ, ಬೀಡಿ ಲೇಔಟ್, ಆಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫ ನಗರ ಸ್ವಲ್ಪಭಾಗ, ಅಮ್ಮಜಾನ್, ಬಾಬಾಜಾನ್, ಜೋಗಲ್‌ಬಾಬಾ ಲೇಔಟ್, ಮಾಗಾನಹಳ್ಳಿ ರಸ್ತೆ ಹಳ್ಳದವರೆಗೆ, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟ್ಯಾಂಡ್, ಜಗಳೂರು ರಸ್ತೆ ಎಆರ್‌ಬಿ ಮಿಲ್, ಚಾಮರಾಜ ಪೇಟೆ, ವಾಟರ್ ಟ್ಯಾಂಕ್, ಎಸ್‌ಎಸ್ ಆಸ್ಪತ್ರೆ, ಅರಳೀಮರದ ಸರ್ಕಲ್, ಬೇತೂರು ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಮಾಗಾನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಎಮ್‌ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಇತರೆ ಪ್ರದೇಶಗಳು. ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್‌ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟಸ್ (ಬೇತೂರು ರಸ್ತೆ) ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ, ಕೆಆರ್ ರಸ್ತೆ, ಗಡಿಯಾರ ಕಂಬ, ಬಿಟಿ ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ ಸ್ವಲ್ಪಭಾಗ, ವಸಂತ ಟಾಕೀಸ್ ಸ್ವಲ್ಪಭಾಗ ಹಾಗೂ ಇತರೆ ಪ್ರದೇಶಗಳು. ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೆಪೇಟೆ, ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಭಾಷಾನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾವುಲ್ಲಾ ಮುಸ್ತಾಫ ನಗರ, ರಜಾಕ್ ಸರ್ಕಲ್, ಭಾಷಾನಗರ ಮುಖ್ಯರಸ್ತೆ, ಸುತ್ತಮುತ್ತ ಬೀಡಿ ಲೇಔಟ್, ಶಿವನಗರ, ರಜಾವುಲ್ಲಾ ಮುಸ್ತಾಫ ನಗರ, ಇಎಸ್‌ಐ ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ ಹಾಗೂ ಸುತ್ತಮುತ್ತಲಿನ ಇತರೆ ಪ್ರದೇಶಗಳು.

ಕೊಂಡಜ್ಜಿ ರಸ್ತೆ, ಎಸ್‌ಜೆಎಮ್ ನಗರ, ಸೇವಾದಳ ಕಾಲೋನಿ, ಹೊಸಕ್ಯಾಂಪ್, ಎಸ್‌ಎಮ್‌ಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ.ಎಮ್ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು, ಎಸ್.ಟಿ.ಪಿ. ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಜಗಳೂರಿನಲ್ಲಿ 12ರಂದು ಚಮನ್ ಷಾ ವಲಿ ಉರುಸು

ಜಗಳೂರು, ಜ 7- ಪಟ್ಟಣದ ಹಜರತ್ ಚಮನ್ ಷಾ ವಲಿಯವರ ಉರುಸು ಕಾರ್ಯಕ್ರಮವನ್ನು ಇದೇ ದಿನಾಂಕ 12 ರಿಂದ 13 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ದರ್ಗಾ ಕಮಿಟಿ ಸದಸ್ಯರು ತಿಳಿಸಿದ್ದಾರೆ.

ಉರುಸ್ ಉತ್ಸವವನ್ನು ಹಿಂದೂ, ಮುಸ್ಲಿಂ ಭಾವೈಕ್ಯತೆಯೊಂದಿಗೆ ವಿಜೃಂಭಣೆಯೊಂದಿಗೆ ನೆರವೇರಿಸ ಲಾಗುವುದು. ಇದೇ ದಿನಾಂಕ 12 ಬುಧವಾರ ಸಂದಲ್ ಅರ್ಪಣೆ ಹಾಗೂ ದಿನಾಂಕ 13 ಗುರುವಾರ ಉರುಸು ಜರುಗಲಿದೆ.

# ಪಟ್ಟಣದ ಮೂಲಭೂತ ಸಮಸ್ಯೆಗಳಿಗೆ ಒತ್ತುಕೊಡಿ

## ಮಲೇಬೆನ್ನೂರು ಪುರಸಭೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರ ಒತ್ತಾಯ



ಮಲೇಬೆನ್ನೂರು, ಜ.7- ಇಲ್ಲಿನ ಪುರಸಭೆಯ 2021-22ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆ ಶುಕ್ರವಾರ ಸರಳವಾಗಿ ಜರುಗಿತು.

ಆರಂಭದಲ್ಲಿ ಪುರಸಭೆ ಅಧಿಕಾರಿ ದಿನಕರ್ ಅವರು ಸಭೆಯ ಉದ್ದೇಶ ತಿಳಿಸಿ, ಬಜೆಟ್ ತಯಾರಿಗೆ ಸಾರ್ವಜನಿಕರು ಸಲಹೆ-ಸಮಸ್ಯೆ ಹಾಗೂ ಕೈಗೊಳ್ಳಬಹುದಾದ ಯೋಜನೆಗಳ ಬಗ್ಗೆ ತಿಳಿಸುವಂತೆ ಕೋರಿದರು.

ಕನ್ನಡ ಸಂಘದ ಸಂಸ್ಥಾಪಕ ಹಾಗೂ ಜೀವ ವೈವಿಧ್ಯ ನಿರ್ವಹಣಾ ಸಮಿತಿ ಸದಸ್ಯ, ಪ್ರಗತಿಪರ ಚಿಂತಕ ಜ್ಯೋತಿ ನಾಗಭೂಷಣ್ ಮಾತನಾಡಿ, ಪಟ್ಟಣದಲ್ಲಿ ಬೀದಿ ನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ಕೊಡಿಸಬೇಕು.

ಸರ್ಕಾರಿ ಕಾಲೇಜು ಬಳಿ ಹೈ ಮಾಸ್ಟ್ ದೀಪ ಹಾಗೂ ಸಿಸಿ ಟಿವಿ ಕ್ಯಾಮೆರಾ ಅಳವಡಿಸಬೇಕು. ಪಟ್ಟಣದ ವ್ಯಾಪ್ತಿಯಲ್ಲಿ ಭದ್ರಾ ಕಾಲುವೆಗೆ ಸುರಕ್ಷಾ ಬೇಲಿ ಹಾಕಬೇಕು. ವಾರ್ಡ್‌ಗಳಲ್ಲಿ ನೀರು ಬಿಡುವ ಸಮಯ ನಿಗದಿಗೊಳಿಸಿ ನಿಯಂತ್ರಕಗಳನ್ನು ಅಳವಡಿಸಬೇಕು.

ಲಭ್ಯವಿರುವ ಸ್ಥಳಗಳಲ್ಲಿ ಉದ್ಯಾನವನ ನಿರ್ಮಾಣಕ್ಕೆ ಒತ್ತು ನೀಡಬೇಕು. ಪ್ರತಿ ತಿಂಗಳಿಗೊಮ್ಮೆ ಪ್ರಾಣಿ, ಪಶು ನಿಯಂತ್ರಣ ಸಮಿತಿ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿ ಸಭೆ ನಡೆಸಬೇಕೆಂದು ನಾಗಭೂಷಣ್ ಸಲಹೆ ನೀಡಿದರು.

ಪುರಸಭೆ ಸದಸ್ಯ ಸಾಬೀರ್ ಅಲಿ ಮಾತನಾಡಿ, ಪಟ್ಟಣದಲ್ಲಿ ನೀರಿನ ಸಮಸ್ಯೆ ಆಗದಂತೆ ಶಾಶ್ವತ ಯೋಜನೆ ರೂಪಿಸಿ ಎಂದರು. 23ನೇ ವಾರ್ಡಿನಲ್ಲಿ ರಸ್ತೆ, ಚರಂಡಿ ನಿರ್ಮಿಸುವಂತೆ ಶಿಕ್ಷಕ ಪಿ. ಹಾಲೇಶ್ ಆಗ್ರಹಿಸಿದರು.

1ನೇ ವಾರ್ಡಿನ ಲೋಹಿತ್ ಅವರು ರಾಜಕಾಲುವೆಯ ಚರಂಡಿ ನೀರು ಎಲ್ಲೆಂದರಲ್ಲಿ ಹರಿಯುತ್ತಿದ್ದು, ಕಾಲುವೆಯಲ್ಲಿ ಹರಿಯುವಂತೆ ದುರಸ್ತಿ ಮಾಡಿಸಿ ಎಂದರು.

ಪಟ್ಟಣದ ಹೊರವಲಯದಲ್ಲಿ ಸ್ವಾಗತ-ವಂದನೆ ನಾಮಫಲಕ ಅಳವಡಿಸುವಂತೆ ಪತ್ರಕರ್ತರಾದ ನಟರಾಜನ್, ಜಿಗಳಿ ಪ್ರಕಾಶ್ ಹೇಳಿದರು.

ಗುಪ್ತವಾರ್ತೆಯ ಕರಿಬಸಪ್ಪ ಅವರು ಸಿಸಿ ಟಿವಿ ಕ್ಯಾಮೆರಾ ದುರಸ್ತಿಗೆ ಅನುದಾನ ಮೀಸಲಿಡಿ ಎಂದು ಮನವಿ ಮಾಡಿದರು. 22ನೇ ವಾರ್ಡಿನ ಪಿ.ಎಸ್. ಬಸವರಾಜ್ ಅವರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ ಎಂದರು.

ಸಭೆಯ ನೇತೃತ್ವ ವಹಿಸಿದ್ದ ಪ್ರಭಾರ ಮುಖ್ಯಾಧಿಕಾರಿ ಗಣೇಶ್‌ರಾವ್ ಮಾತನಾಡಿ, ಎಲ್ಲರ ಸಲಹೆಗಳನ್ನು ಸ್ವೀಕರಿಸಿದ್ದು, ಇನ್ನೊಮ್ಮೆ ಸಭೆ ನಡೆಸಿ ನಂತರಪೂರಕಬಜೆಟ್‌ಮಂಡಿಸಲಾಗುವುದೆಂದರು.

ಪುರಸಭೆ ಕಂದಾಯಾಧಿಕಾರಿ ಪ್ರಭು, ಇಂಜಿನಿಯರ್ ಹಾಲೇಶಪ್ಪ, ಪರಿಸರ ಇಂಜಿನಿಯರ್ ಉಮೇಶ್, ಆರೋಗ್ಯಾಧಿಕಾರಿ ನವೀನ್, ಇಮ್ರಾನ್, ಜಗದೀಶ್ ಮತ್ತಿತರರು ಸಭೆಯಲ್ಲಿದ್ದರು.

# ದೂಡಾ : ಜಮೀನು ನೀಡಲು ರೈತರ ಸಮ್ಮತಿ



**(1ನೇ ಪುಟದಿಂದ)** ಒಂದಕ್ಕೆ 1.18 ಕೋಟಿ ರೂ. ನೀಡಲು, ಆ ಭಾಗದ ಜಮೀನಿನ ಮಾಲೀಕರೊಂದಿಗೆ ಚರ್ಚೆ ನಡೆಸಿದರು. ಅದರಂತೆ ಜಮೀನಿಗೆ ಪ್ರತಿ ಎಕರೆಗೆ 1.18 ಕೋಟಿ ರೂ. ನಂತೆ ಪಡೆಯಲು ಎಲ್ಲ ರೈತರು ಒಪ್ಪಿಗೆ ಸೂಚಿಸಿದ್ದಾರೆ ಎಂದು ದೇವರಮನಿ ಹೇಳಿದರು.

ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ತಹಸೀಲ್ದಾರ್ ಗಿರೀಶ್, ಉಪನೋಂದಣಾಧಿಕಾರಿ ಹಾಗೂ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ. ಹೆಚ್. ಶ್ರೀಕರ್, ಪ್ರಾಧಿಕಾರದ ಸದಸ್ಯರುಗಳಾದ ಮಾರುತಿರಾವ್ ಘಾಟ್ಗೆ, ಲಕ್ಷ್ಮಣ, ಬಾತಿ ಚಂದ್ರಶೇಖರ್, ಗೌರಮ್ಮ ವಿ. ಪಾಟೀಲ್, ರೈತ ಮುಖಂಡರುಗಳಾದ ಜಿ.ಸಿ. ದೇವರಾಜ್, ಎಂ. ಹನುಮಂತಪ್ಪ, ಷಣ್ಮುಖಪ್ಪ, ನರಸಪ್ಪರ ಶಿವಣ್ಣ ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

# ಕರ್ಫ್ಯೂ ವೇಳೆ ಮದ್ಯ ಮಾರಾಟ ನಿಷೇಧ

**(1ನೇ ಪುಟದಿಂದ)** ಕರ್ಫ್ಯೂ ಸಂದರ್ಭದಲ್ಲೂ ಮದ್ಯ ಮಾರಾಟಕ್ಕೆ ಅವಕಾಶ ನೀಡಿದ್ದಲ್ಲದೆ, ಬಾರ್ ಮತ್ತು ಹೋಟೆಲ್‌ಗಳಲ್ಲಿ ಶೇ. 50 ರಷ್ಟು ಮಂದಿ ಕುಳಿತುಕೊ ಳ್ಳಲು ಅವಕಾಶ ನೀಡಿದ್ದರು. ಕಳೆದ ಗುರುವಾರ ಅಬಕಾರಿ ಆಯುಕ್ತರು ಹೊರಡಿಸಿದ ಸುತ್ತೋಲೆಯಿಂದಾಗಿ ಈ ಗೊಂದಲ ಉಂಟಾಗಿದೆ.

ಇದಾದ ನಂತರ ಸರ್ಕಾರ ಮತ್ತೊಂದು ಆದೇಶ ಹೊರಡಿಸಿ, ಕರ್ಫ್ಯೂ ಸಂದರ್ಭದಲ್ಲಿ ಮದ್ಯ ಮಾರಾಟ ನಿಷೇಧ ಮಾಡಿದ್ದಲ್ಲದೆ, ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗ ಳಿಗೆ ಅವಕಾಶ ನೀಡಿತ್ತು. ಇಷ್ಟರ ನಡುವೆಯೂ ಗೊಂದಲಕ್ಕೀ ಡಾದ ಡಿಸಿ ಸರ್ಕಾರಿ ಆದೇಶ ಪರಿಶೀಲಿಸದೇ ಅಬಕಾರಿ ಆಯುಕ್ತರ ಸುತ್ತೋಲೆ ಆಧಾರವಾಗಿಟ್ಟು ಕೊಂಡು ಪ್ರತ್ಯೇಕ ಆದೇಶ ಹೊರಡಿಸಿದ್ದರು. ಅಬಕಾರಿ ಸಚಿವರೇ ಈ ಗೊಂದಲಕ್ಕೆ ಇಂದು ತೆರೆ ಎಳೆದಿದ್ದಲ್ಲದೆ, ಕರ್ಫ್ಯೂ ಸಂದರ್ಭದಲ್ಲಿ ಮದ್ಯ ಮಾರಾಟ ನಿಷೇಧ ಎಂದು ಸ್ಪಷ್ಟಪಡಿಸಿದ್ದಾರೆ.

# 'ದೇವರ' ಹಾಜರಿಯ ಕೋರ್ಟ್ ಆದೇಶಕ್ಕೆ ತಡೆ

ಚೆನ್ನೈ, ಜ. 7 – ತಮಿಳುನಾಡಿನ ತಿರುಪೂರು ಜಿಲ್ಲೆಯ ದೇವಾಲಯವೊಂದರ ದೇವರ ಮೂರ್ತಿಯನ್ನು ತನ್ನೆದುರು ಹಾಜರು ಪಡಿಸುವಂತೆ ಕೆಳ ನ್ಯಾಯಾಲಯ ಆದೇಶಿಸಿರುವುದನ್ನು ಮದ್ರಾಸ್ ಹೈಕೋರ್ಟ್ ತಡೆದಿದ್ದು, ದೇವರಿಗೆ ನ್ಯಾಯಾಲಯ ಸಮನ್ಸ್ ಕಳಿಸಬಹುದೇ ಎಂದು ಅಚ್ಚರಿ ವ್ಯಕ್ತಪಡಿಸಿದೆ.

ತಿರುಪೂರು ಜಿಲ್ಲೆಯ ಸಿವಿರಪಾಳ್ಯಂನಲ್ಲಿರುವ ಪರಮಶಿವನ್ ಸ್ವಾಮಿ ದೇವಾಲಯದ ಮೂರ್ತಿ ಕಳ್ಳತನವಾಗಿತ್ತು. ಪೊಲೀಸರು ಪ್ರಕರಣದ ವಿಚಾರಣೆ ನಡೆಸಿ ಮೂರ್ತಿಯನ್ನು ಪತ್ತೆ ಮಾಡಿದ್ದರು.

ಮೂರ್ತಿಯನ್ನು ನ್ಯಾಯಾಲಯದ ಎದುರು ಹಾಜರು ಪಡಿಸಿದ ನಂತರ, ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸಾಂಪ್ರದಾಯಿಕ ವಿಧಿ ವಿಧಾನಗಳಂತೆ ಮರು ಪ್ರತಿಷ್ಠಾಪನೆ ಮಾಡಲಾಗಿತ್ತು.

ಮರು ಪ್ರತಿಷ್ಠಾಪನೆ ನಂತರ ಸಾವಿರಾರು ಭಕ್ತರು ಪೂಜೆ ಮಾಡುತ್ತಿದ್ದರು. ಆದರೆ, ಪ್ರಕರಣದ ವಿಚಾರಣೆ ಇನ್ನೂ ಮುಂದುವರೆಸಬೇಕಿರುವುದರಿಂದ, ಮೂಲ ಮೂರ್ತಿಯನ್ನೇ ನ್ಯಾಯಾಲಯದ ಎದುರು ಹಾಜರು ಪಡಿಸುವಂತೆ ಕುಂಭಕೋಣಂ ನ್ಯಾಯಾಲಯ ಜನವರಿ 6ರಂದು ಆದೇಶ ಹೊರಡಿಸಿತ್ತು.

ನ್ಯಾಯಾಲಯದ ಆದೇಶದಂತೆ ದೇವಾಲಯದ ಅಧಿಕಾರಿ ಮೂರ್ತಿಯನ್ನು ತಂದು ಕುಂಭಕೋಣಂ ನ್ಯಾಯಾಲಯದ ಎದುರು ಹಾಜರುಪಡಿಸಲು ಪ್ರಯತ್ನ ನಡೆಸಿದ್ದರು. ಇದಕ್ಕೆ ಭಕ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಬಗ್ಗೆ ಹೈಕೋರ್ಟ್‌ನಲ್ಲೂ ಅರ್ಜಿ ದಾಖಲಿಸಲಾಗಿತ್ತು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ಸುರೇಶ್ ಕುಮಾರ್, ಮೂರ್ತಿಯನ್ನು ತರುವ ಬದಲು ಅಡ್ವೋಕೇಟ್ - ಕಮೀಷನರ್ ನೇಮಿಸುವ ಮೂಲಕ ಮೂರ್ತಿಯ ಪರಿಶೀಲನೆ ನಡೆಸಿ ವರದಿ ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ಭಕ್ತರು ಮೂರ್ತಿಯನ್ನು ದೇವರು ಎಂದು ಭಾವಿಸಿದ್ದಾರೆ. ಕೇವಲ ಪರಿಶೀಲನೆಯ ಉದ್ದೇಶಕ್ಕಾಗಿ ದೇವರ ಮೂರ್ತಿಯನ್ನೇ ಅಪರಾಧ ಪ್ರಕರಣದ ವಸ್ತು ಎಂದು ಭಾವಿಸಿ ನ್ಯಾಯಾಲಯ ಸಮನ್ಸ್ ಕಳಿಸಬೇಕಿಲ್ಲ. ದೊಡ್ಡ ಸಂಖ್ಯೆಯ ಭಕ್ತರ ಭಾವನೆಗಳಿಗೆ ನೋವು ತರದೇ, ದೈವತ್ವಕ್ಕೆ ಭಂಗ ತರದೇ ಮೂರ್ತಿಯನ್ನು ಪರಿಶೀಲಿಸಬಹುದಾಗಿದೆ ಎಂದು ಹೈಕೋರ್ಟ್ ತಿಳಿಸಿದೆ.

# ಇಂದು ಅಯ್ಯಪ್ಪ ಸ್ವಾಮಿ ದೀಪೋತ್ಸವ

ದಾವಣಗೆರೆ, ಜ. 7- ನಗರದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಶ್ರೀ ಶಬರಿಮಲೈ ಅಯ್ಯಪ್ಪ ಸ್ವಾಮಿ ಭಕ್ತ ವೃಂದ ಮಂಡಳಿ ವತಿಯಿಂದ 27ನೇ ವರ್ಷದ ಮಹಾ ದೀಪೋತ್ಸವ ಅನ್ನ ಸಂತರ್ಪಣೆ ಹಾಗೂ ಜ್ಯೋತಿ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಂಡಳಿಯ ಪ್ರಧಾನ ಕಾರ್ಯದರ್ಶಿ ಪಿ.ರಾಜಕುಮಾರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 8 ರ ಶನಿವಾರ ಪಡಿ ಪೂಜೆ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮವಿದ್ದು, ಕರ್ಫ್ಯೂ ಹಿನ್ನೆಲೆಯಲ್ಲಿ ಸ್ವಾಮಿಗಳ ಸಮ್ಮುಖದಲ್ಲಿ ಪೂಜೆಯನ್ನು ಸಾಂಕೇತಿಕವಾಗಿ ನಡೆಸಲಾಗುವುದು ಎಂದು ಹೇಳಿದರು. ಶನಿವಾರ ಬೆಳಿಗ್ಗೆ 11 ಗಂಟೆಗೆ ಅಭಿಷೇಕ, ಸಂಜೆ 6 ಗಂಟೆ ಸ್ವಾಮಿ ಪ್ರತಿಷ್ಠಾಪನೆ ಹಾಗೂ 6.30ಕ್ಕೆ ಭಜನಾ ಕಾರ್ಯಕ್ರಮವಿದೆ. ಮಂಡಳಿಯ ಡಿ.ಆರ್. ರವೀಂದ್ರ, ಬಾಳೆಹೊಲ, ಅನಿಲ್ ಗುರುಸ್ವಾಮಿ, ಶಿವಗುರು ಸ್ವಾಮಿ, ಕೆ.ರೇವಣಸಿದ್ದಪ್ಪ, ಅಜಯ್ ಸ್ವಾಮಿ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.


**ANVITH ENTERPRISES**
**FINANCIAL ADVISOR®**
**P.J. EXTENSION, DAVANGERE-577 004.**

1) ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆಯಿಂದ ನಷ್ಟವನ್ನು ಅನುಭವಿಸಿದ್ದೀರಾ?


2) ಪ್ರತಿದಿನದ ಭಾರೀ ಏರುಪೇರಿನ ವಹಿವಾಟಿಗೆ ಹಣವನ್ನು ಹೇಗೆ ಹೂಡಿಕೆ ಮಾಡಬೇಕೆಂಬ ಗೊಂದಲವೇ? ಈ ಸಮಸ್ಯೆಗಳಿಂದ ಮುಕ್ತರಾಗಿ.

3) Long-Term ಮತ್ತು Short-Term ಹೂಡಿಕೆ ಮುಖಾಂತರ ಸುರಕ್ಷಿತವಾಗಿ ಉತ್ತಮ ಲಾಭವನ್ನು ಪಡೆಯಲು ಹಾಗೂ

4) ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು Children's Savings Plans, Retirement Plans, Income-Tax Saving Plans, Health plans, Term Plans ಹಾಗೂ ಆರ್ಥಿಕವಾಗಿ ಸಬಲರಾಗಲು ಸಂಪರ್ಕಿಸಿ :

**VIJAYA NIRANJANA MYLARA-8792673593**


# ವೈದ್ಯಕೀಯ ಲೋಕದ ನಕ್ಷತ್ರ ಡಾ|| ನಿರ್ಮಲ ಕೇಸರಿ



ಸದಾ ನಗು ಮುಖದ, ಸರಳ, ಸೌಮ್ಯ, ಸುಂದರ ನಿರ್ಮಲ ಮನಸ್ಸಿನ ಮಕ್ಕಳ ಮುಗ್ಧತೆಯನ್ನು ಹೊಂದಿದ ಡಾ|| ನಿರ್ಮಲ ಕೇಸರಿಯವರ ನೆನಪು ಚಿರನೂತನ. ದಾವಣಗೆರೆ ಹಾಗೂ ಸುತ್ತಮುತ್ತಲಿನ ಜನತೆಗೆ ಚಿರಪರಿಚಿತೆ.

'ಮದರ್ ಕೇಸರಿ' ಎಂದೇ ಹೆಸರಾಗಿರುವ ಡಾ|| ನಿರ್ಮಲ ಕೇಸರಿಯವರ 6ನೇ ಪುಣ್ಯತಿಥಿ. ಶಿವೈಕ್ಯರಾಗಿ 6 ವರ್ಷಗಳೇ ಕಳೆದಿದ್ದರೂ ಅವರ ನೆನಪು ಅಜರಾಮರ. ಎಲ್ಲಾ ಕೆಲಸಗಳಲ್ಲಿ ವೈದ್ಯಕೀಯ ಕಾರ್ಯಕ್ರಮಗಳಲ್ಲಿ ಇಂದಿಗೂ ಮೇಡಂರವರ ನೆನಪು ಕಾಡುತ್ತಿರುತ್ತದೆ.

60ರ ದಶಕದಲ್ಲಿ ಉನ್ನತ ವ್ಯಾಸಂಗವನ್ನು ಅಮೆರಿಕ, ಇಂಗ್ಲೆಂಡ್‌ನಲ್ಲಿ ಮುಗಿಸಿ ಅನೇಕ ಪದವಿಗಳೊಂದಿಗೆ ಮಧ್ಯ ಕರ್ನಾಟಕದ ಭಾಗವಾಗಿರುವ ದಾವಣಗೆರೆಗೆ ಬಂದು, ತಾವು ಕಲಿತ ಜ್ಞಾನಾರ್ಜನೆಯನ್ನು ಬಳಸಿ, ದಾವಣಗೆರೆಯ ಮಕ್ಕಳ ಆರೋಗ್ಯಕ್ಕಾಗಿ ಹಗಲಿರುಳು ಶ್ರಮಿಸಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಮಕ್ಕಳ ಬಗ್ಗೆ ಅತಿಯಾದ ಕಾಳಜಿ ಹಾಗೂ ಮಮತೆಯನ್ನು ಹೊಂದಿದ್ದ ಡಾ|| ಕೇಸರಿಯವರ ಪರಿಶ್ರಮದಿಂದಾಗಿ ಅವರ ಕನಸಿನ ಕೂಸಾದ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆಯು ಇಂದು ಬೃಹದಾಕಾರವಾಗಿ ಬೆಳೆದು, ಇಲ್ಲಿಂದ ತರಬೇತಿ ಹೊಂದಿದ ವೈದ್ಯರುಗಳು ಹಾಗೂ ಆರೋಗ್ಯ ಸಿಬ್ಬಂದಿಯವರು ದೇಶ-ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ. ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆಯು ಸುತ್ತಮುತ್ತಲಿನ ಮಕ್ಕಳಿಗೆ ಜೀವನಾಡಿಯಾಗಿದೆ. ಡಾ|| ನಿರ್ಮಲ ಕೇಸರಿಯವರ ನಿಸ್ವಾರ್ಥ ಸೇವೆಯಿಂದಾಗಿ ದಾವಣಗೆರೆ ಅಪಾರವಾದ ಕೀರ್ತಿ ಸಂದಿದೆ.

ಅಪ್ರತಿಮ ಸಾಧಕಿಯಾಗಿ ವೈದ್ಯಕೀಯ ಜಗತ್ತಿನ ಮಹಿಳಾ ಲೋಕದ ಮಹಾನ್ ತಾರೆ, ಕರುಣಾಮಯಿ, ಶ್ರೇಷ್ಠ ಗುರುವಾಗಿ ಎಲ್ಲರಿಗೂ ಮಾರ್ಗದರ್ಶಕರಾಗಿ, ಮಧ್ಯ ಕರ್ನಾಟಕದ ಮದರ್ ಕೇಸರಿ ಮನುಕುಲದ ಸೌಭಾಗ್ಯವತಿಯಾಗಿ, ತಾಯಂದಿರ ತಾಯಿಯಾಗಿ, ಮಮತಾಮಯಿ, ಪರಿಪೂರ್ಣ ಜೀವನವನ್ನು ನಡೆಸಿದಂತಹ ಮಹಾನ್ ತಾಯಿ. ಅವರ ನಿಸ್ವಾರ್ಥ ಸೇವೆ ಅನೇಕರಿಗೆ ಸ್ಫೂರ್ತಿದಾಯಕ, ಅವರ ಮಾರ್ಗದರ್ಶನದಲ್ಲಿ ತರಬೇತಿ ಹೊಂದಿದ ಅನೇಕ ವೈದ್ಯರುಗಳು ಅವರ ಕೆಲಸಗಳನ್ನು ನಡೆಸುತ್ತಿರುವುದು ಶ್ಲಾಘನೀಯ.

ಅವರೊಡನೆ ಕಳೆದಂತಹ ಸುಂದರ ದಿನಗಳ ಒಂದು ಮೆಲುಕು. ಅವರ ನಡೆ-ನುಡಿ ಹಾಗೂ ಅವರ ಕಾರ್ಯಗಳು ನಮಗೆ ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡಲು ಸ್ಫೂರ್ತಿದಾಯಕ ವಾಗಲೆಂದು ಈ ಸಂದರ್ಭದಲ್ಲಿ ಆಶಿಸೋಣ.




**- ಡಾ|| ಲತಾ ಜಿ.ಎಸ್.**
ಪ್ರಾಧ್ಯಾಪಕರು, ಮಕ್ಕಳ ವಿಭಾಗ
ಎಸ್.ಎಸ್.ಐ.ಎಸ್.
ಎಂ.ಆರ್.ಸಿ.,
ದಾವಣಗೆರೆ.


**ಶಬರಿಗಿರಿ ರಿಯಲ್ ಎಸ್ಟೇಟ್ ದಾವಣಗೆರೆ**

ಹದಡಿ ರೋಡಿಗೆ 40x70 , 40x120 ಕಮರ್ಷಿಯಲ್ ಬಿಲ್ಡಿಂಗ್ ಮಾರಾಟಕಿದೆ ಹಾಗೂ 40x60 ಅಪಾರ್ಟ್ಮೆಂಟ್ ಅಲ್ಲಿ ಎಂಟು ಮನೆಗಳಿದ್ದು ಮತ್ತು ಪಾರ್ಕಿಂಗ್ ವ್ಯವಸ್ಥೆ ಇರುವ ಅಪಾರ್ಟ್ಮೆಂಟ್ ಮಾರಾಟಕ್ಕಿದೆ ಹಾಗೂ 65x55 ಕಮರ್ಷಿಯಲ್ ಸೈಟ್ ಮತ್ತು P.B road ಗೆ , 75x340 , 80x300 , 250x400 ಕಮರ್ಷಿಯಲ್ ಸೈಟ್ಗಳು ಮಾರಾಟಕಿದೆ. ಹಾಗು 30x45 ಎರಡು ದುಪ್ಲೆಕ್ಷ್ ಮನೆಗಳು ಹಾಗು 40x60 ಎರಡು ಮನೆಗಳು ಮಾರಾಟಕ್ಕಿವೆ. ಆಸಕ್ತರು ಸಂಪರ್ಕಿಸಿ :

**ಫೋನ್ : 89714 99575**

**ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು**
**Most Populr Astrologer**



ಉಚಿತ ಭವಿಷ್ಯ ಖಚಿತ ಪರಿಹಾರ, ಫೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ಧ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ

**ಮೊಬೈಲ್ : 89716 99826**


**DRAFT PUBLIC NOTICE**
**IN THE COURT OF THE VII ADDL. DISTRICT JUDGE AT MYSURU**

**R.A. No.215/2020**

Appellant : **Kum. Drithika** V/s
Respondents : **M.G. Basavaraju & Others**
Respondent No.2: **Kumar M.G. S/o M.G. Basavaraju**
Presently Staying at House No. 01, Govt, ITI College Quaters
C/o **Roopa Devi N.C.,** Hadadi Road, Davanagere-577 005

**PUBLIC NOTICE**

The 2nd respondent Named above is hereby notified that the above appellant has preferred an appeal challenging the judgment and decree passed in O.S. No. 63/2012 on the file of the VII Addl. Senior Civil Judge at Mysuru. The above appeal stands posted for the appearance of Kumar M.G., the 2nd respondent to 17.01.2022 at A.M. Failing which the matter will be proceeded ex-parte
given under my hand and seal of the Cour this the 30th day of December 2021

**Ramaraveendra N.,** and **M.N. Sumana**
Advocates,
"Amara" No. 1226/1, 3rd Main,
2nd Cross, Krishanamurthy
Puram, Mysuru-570 004.
**Date : 29.12.2021**
**Place : Mysuru**

**CHIFE ADMINISTRATIVE OFFICER, DISTRICT AND SESSION COURT AT MYSURU**
**(by order of the court)**

# ಮಕ್ಕಳ ಬಾಲ್ಯದ ಹಕ್ಕು ಕಸಿಯಲಾಗದು



## ಬಾಲ ಕಾರ್ಮಿಕ ಪದ್ಧತಿ ನಿಷೇಧ ಜಾಗೃತಿ ಜಾಥಾಗೆ ನ್ಯಾಯಮೂರ್ತಿ ಪ್ರವೀಣ್ ನಾಯಕ್ ಚಾಲನೆ

ದಾವಣಗೆರೆ, ಜ. 7 - ಸಂವಿಧಾನದ ಆಶಯದಂತೆ ಪ್ರತಿಯೊಂದು ಮಗುವಿಗೂ ಬಾಲ್ಯ ಅನುಭವಿಸುವ ಹಕ್ಕಿದೆ. ಅದನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಹೇಳಿದ್ದಾರೆ.

ನಗರದ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಛೇರಿ ಆವರಣದಲ್ಲಿ ಇಂದು ಆಯೋಜಿಸಿದ್ದ ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ ಕುರಿತ ಸಂಚಾರಿ ರಥದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಮಕ್ಕಳ ಬಾಲ್ಯ ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರ ವಿವಿಧ ಕಾನೂನುಗಳನ್ನು ಜಾರಿ ಮಾಡಿದೆ. 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಉಚಿತ ಶಿಕ್ಷಣ, ಸೂಕ್ತ ಆಹಾರ ನೀಡುವಲ್ಲಿ ನಿರಂತರ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ ಕಾರ್ಮಿಕ ಪದ್ಧತಿ ನಿರ್ಮೂಲನಾ ಸಂಚಾರ ಜಾಗೃತಿ ಜಾಥಾ ಕಾರ್ಯಕ್ರಮ ಅತ್ಯಂತ ಮಹತ್ವದ್ದಾಗಿದೆ. ಜಾಗೃತಿ ಜಾಥಾ ಜಿಲ್ಲೆಯಾದ್ಯಂತ ಜ. 14 ರವರೆಗೆ ಸಂಚರಿಸಲಿದೆ ಎಂದು ನ್ಯಾಯಮೂರ್ತಿ ಹೇಳಿದರು.

ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ ಡಿ.ಜಿ ನಾಗೇಶ್ ಮಾತನಾಡಿ, ಮಕ್ಕಳನ್ನು ಕೂಲಿಯಾಳುಗಳಾಗಿ ಹಣಕ್ಕಾಗಿ ದುಡಿಸುವುದು ಅತ್ಯಂತ ಕೆಟ್ಟ ಪದ್ಧತಿ. ಇದನ್ನು ಕೊನೆಗಾಣಿಸಲು ಆರೋಗ್ಯವಾದ ವಾತಾವರಣ ನಿರ್ಮಿಸುವ ಅಗತ್ಯವಿದೆ ಎಂದರು.

ಇತ್ತೀಚಿನ ಸಮೀಕ್ಷೆಯ ಪ್ರಕಾರ ದಾವಣಗೆರೆ ಒಂದರಲ್ಲೇ 54 ಬಾಲಕಾರ್ಮಿಕ ಮಕ್ಕಳನ್ನು ಗುರುತಿಸಲಾಗಿದ್ದು, ಕಳೆದ ವರ್ಷ 6 ಮತ್ತು ಈ ವರ್ಷ 1 ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸ್ಫೂರ್ತಿ ಸ್ವಯಂ ಸೇವಾ ಸಂಸ್ಥೆಯ ಅಧ್ಯಕ್ಷ ರೂಪ್ಲಾನಾಯ್ಕ್ ಮಾತನಾಡಿ, ಕೊರೊನಾ ಬಂದ ನಂತರ ಹಲವು ಮಕ್ಕಳು ಬೀದಿ ಬೀದಿಗಳಲ್ಲಿ ಭಿಕ್ಷೆ ಬೇಡುವುದು, ಹೋಟೆಲ್, ಗ್ಯಾರೇಜ್ ಹಾಗೂ ಇತರೆಡೆ ಬಾಲಕಾರ್ಮಿಕರಾಗಿ ದುಡಿಯುವುದು ಹೆಚ್ಚಾಗಿದೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು ವಿಷಾದನೀಯ ಎಂದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ.ಆರ್. ತಿಪ್ಪೇಶಪ್ಪ, ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತೆ ಎಸ್.ಆರ್ ವೀಣಾ, ಕಾರ್ಮಿಕ ಅಧಿಕಾರಿ ಜಿ. ಇಬ್ರಾಹಿಂ ಸಾಬ್, ಪೀಪಲ್ ಸ್ವಯಂ ಸೇವಾ ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ ಹಾಗೂ ಕಾರ್ಮಿಕ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು. ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ ಕುರಿತ ಭಿತ್ತಿ ಪತ್ರವನ್ನು ಗಣ್ಯರು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

# 70 ಕೋಟಿ ರೂ. ವೆಚ್ಚದಲ್ಲಿ ಜವಳಿ ಪಾರ್ಕ್



## ರಾಣೇಬೆನ್ನೂರು ತಾ. ತುಮ್ಮಿನಕಟ್ಟೆಯಲ್ಲಿ ಶಾಲಾ ಕೊಠಡಿಗಳ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಶಾಸಕ ಅರುಣಕುಮಾರ್

ರಾಣೇಬೆನ್ನೂರು, ಜ.7- 70 ಕೋಟಿ ರೂ. ವೆಚ್ಚದಲ್ಲಿ ತುಮ್ಮಿನಕಟ್ಟೆ ಸಮೀಪದ ಮಾಳನಾಯ್ಕನಹಳ್ಳಿಯಲ್ಲಿ ಜವಳಿ ಪಾರ್ಕ್ ನಿರ್ಮಿಸಲಾಗುವುದು ಎಂದು ಶಾಸಕ ಅರುಣಕುಮಾರ್ ಪೂಜಾರ ಹೇಳಿದರು.

ತಾಲ್ಲೂಕಿನ ತುಮ್ಮಿನಕಟ್ಟೆಯಲ್ಲಿ ಶಾಲಾ ಕೊಠಡಿಗಳ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಯುವಕರಿಗೆ ಉದ್ಯೋಗ ಸೃಷ್ಟಿಸುವ ಕಳಕಳಿ ಮುಖ್ಯಮಂತ್ರಿಗಳಿಗಿದೆ. ಅದನ್ನು ಗಮನದಲ್ಲಿರಿಸಿಕೊಂಡು ಜವಳಿ ಪಾರ್ಕ್‌ಗೆ ಸಮ್ಮತಿಸಿದ್ದಾರೆ. ಜವಳಿ ಪಾರ್ಕ್ ಮಾಡುವುದರಿಂದ ಪೂರಕ ಕೈಗಾರಿಕೆಗಳು ಆರಂಭವಾಗುತ್ತವೆ. ಅದರಿಂದ ತುಮ್ಮಿನಕಟ್ಟೆ ಸೇರಿದಂತೆ, ನನ್ನ ವಿಧಾನಸಭಾ ಕ್ಷೇತ್ರದ ಸಾವಿರಾರು ನಿರುದ್ಯೋಗಿ ಯುವಕರಿಗೆ ಉದ್ಯೋಗ ದೊರಕಲಿದೆ ಎಂದು ಶಾಸಕರು ಹೇಳಿದರು.

ಈ ವರೆಗಿನ ನನ್ನ ಅವಧಿಯಲ್ಲಿ 55 ಕೊಠಡಿಗಳನ್ನು ನಿರ್ಮಿಸಲಾಗಿದೆ. ಹಿಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಇಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ವಿದೇಶದ ಶಾಲೆಗಳಲ್ಲಿ ಕಲಿಯುತ್ತಿದ್ದೇವೆ ಎನ್ನುವ ಅನುಭವ ಇಲ್ಲಿನ ಶಾಲಾ ಮಕ್ಕಳಲ್ಲಿ ಉಂಟಾಗುವಂತೆ ಕೊಠಡಿಗಳನ್ನು ನಿರ್ಮಿಸುವ ಹಂಬಲ ನನ್ನದಿದೆ ಎಂದರು.

ಕ್ಷೇತ್ರದ 18 ಸಾವಿರ ರೈತರಲ್ಲಿ 13 ಸಾವಿರ ರೈತರಿಗೆ ಸಹಾಯ ಧನ ನೀಡಲಾಗುತ್ತಿದೆ. ಆ ಹಣ ರೈತರ ಖಾತೆಗಳಿಗೆ ನೇರವಾಗಿ ಬರುತ್ತಿದೆ. ನೇಕಾರರ ಬಗ್ಗೆಯೂ ನಮ್ಮ ಸರ್ಕಾರಕ್ಕೆ ಬಹಳಷ್ಟು ಕಳಕಳಿ ಇದ್ದು, ಅವರ ಕಲ್ಯಾಣಕ್ಕೆ ಪೂರಕ ಚಿಂತನೆ ನಡೆದಿದೆ ಎಂದು ಶಾಸಕರು ಹೇಳಿದರು.

ವೇದಿಕೆಯಲ್ಲಿ ಗೋಣೆಪ್ಪ ದೀಪಾವಳಿ, ಸಿದ್ದು ಚಿಕ್ಕಬಿದರಿ, ಮಂಗಳಗೌರಿ ಪೂಜಾರ, ಏಕನಾಥ ಭಾನುವಳ್ಳಿ ಇದ್ದರು. ಚೌಡಯ್ಯ ದಾನಾಪುರದ ಶ್ರೀ ಚಿತ್ರಶೇಖರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಚೌಡಯ್ಯ ದಾನಾಪುರದಲ್ಲಿ 65 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿದ 6 ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದ ಶಾಸಕರು, ಈ ಗ್ರಾಮದ ಪ್ರೌಢ ಶಾಲೆಗೆ ಈ ವರ್ಷ ಸ್ವಂತ ಕಟ್ಟಡ ಕಟ್ಟಲಾಗುವುದು ಎಂದರು.

ತಾಲ್ಲೂಕಿನ ಕೊನೆಯ ಹಳ್ಳಿಯಾದರೂ ಸಹ ಇಲ್ಲಿ 8 ಕೋಟಿ ರೂ. ವೆಚ್ಚದ ಕಾಮಗಾರಿ ಮಾಡಲಾಗಿದೆ. ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯವರಾಗಿದ್ದು, ಅಭಿವೃದ್ಧಿಯ ಪರ್ವ ಪ್ರಾರಂಭವಾಗಿದೆ ಎಂದು ಶಾಸಕರು ಹೇಳಿದರು.

ನನ್ನ ಹಾಗೂ ಮುಖ್ಯಮಂತ್ರಿಗಳ ಜೊತೆಗಿನ ಒಡನಾಟದಿಂದಾಗಿ ರಾಜ್ಯದ ಅನೇಕ ಶಾಸಕ ಮಿತ್ರರು ನನಗೆ ಎರಡನೇ ಮುಖ್ಯಮಂತ್ರಿ ಎಂದು ಕರೆಯುತ್ತಾರೆ. ನಮ್ಮಿಬ್ಬರ ನಡುವೆ ಇರುವ ಸಹೋದರತ್ವದ ಭಾವನೆಯನ್ನು ಸದುಪಯೋಗ ಮಾಡಿಕೊಂಡು ಜನಪರ ಕೆಲಸಗಳನ್ನು ಮಾಡುತ್ತೇನೆ ಎಂದು ಶಾಸಕ ಅರುಣಕುಮಾರ ಭರವಸೆ ನೀಡಿದರು.

## ತಂದೆ-ಮಗಳು ರಾಜಕೀಯ ಜೋಡಿ



ದಾವಣಗೆರೆ, ಜ.7- ಅಪ್ಪ ಬೆಳವನೂರು ಗ್ರಾಮ ಪಂಚಾಯಿತಿ ಅಧ್ಯಕ್ಷ, ಮಗಳು ದಾವಣಗೆರೆ ಮಹಾನಗರ ಪಾಲಿಕೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷೆ.

ಬೆಳವನೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ತುರ್ಚಘಟ್ಟ ಗ್ರಾಮದ ದಾಸರ ಶೇಖರಪ್ಪ ಅವರು ಬೆಳವನೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಬೆಳವನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತುರ್ಚಘಟ್ಟ ಗ್ರಾಮದಲ್ಲಿ ಪಂಚಾಯಿತಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು.

ಶೇಖರಪ್ಪ ಅವರ ಮಗಳು ಶ್ರೀಮತಿ ಡಿ.ಎಸ್. ಉಮಾ ಪ್ರಕಾಶ್ ದಾವಣಗೆರೆ ಮಹಾನಗರ ಪಾಲಿಕೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದಾರೆ. 2009ರಲ್ಲಿ ಮಹಾನಗರ ಪಾಲಿಕೆ ಮಹಾಪೌರರಾಗಿದ್ದರು.




ಬೇಸಿಗೆ ಹಂಗಾಮಿನ ಬೆಳೆಗಳಿಗಾಗಿ ಭದ್ರಾ ಜಲಾಶಯದಿಂದ ನಾಲೆಗಳಿಗೆ ಬಿಟ್ಟಿರುವ ನೀರಿನಲ್ಲಿ ಅಚ್ಚುಕಟ್ಟಿನ ರೈತರು ಭತ್ತದ ಸಸಿ ಮಡಿ ಸಿದ್ದಪಡಿಸುತ್ತಿದ್ದರೆ ಇತ್ತ ದೇವರಬೆಳಕೆರೆ ಪಿಕಪ್ ಜಲಾಶಯ ಮತ್ತು ತುಂಗಭದ್ರಾ ನದಿ ಪಾತ್ರದ ರೈತರು ಈಗಾಗಲೇ ಬೆಳೆಸಿರುವ ಭತ್ತದ ಸಸಿಯಿಂದ ನಾಟಿ ಮಾಡುತ್ತಿರುವ ದೃಶ್ಯ ಗುರುವಾರ ಉಕ್ಕಡಗಾತ್ರಿ ಸಮೀಪ ಕಂಡು ಬಂತು.

## ಜಿಲ್ಲೆಯಲ್ಲಿ ಇಂದು-ನಾಳೆ ಖಾಸಗಿ ಬಸ್ ಸಂಚಾರ ಸ್ಥಗಿತ



ದಾವಣಗೆರೆ, ಜ.7 - ನಾಳೆ ಮತ್ತು ನಾಡಿದ್ದು ಸರ್ಕಾರ ನಿಗದಿಪಡಿಸಿರುವ ವಾರಾಂತ್ಯ ಕರ್ಫ್ಯೂ ಸಂದರ್ಭದಲ್ಲಿ ಜಿಲ್ಲೆಯಾದ್ಯಂತ ಖಾಸಗಿ ಬಸ್‌ಗಳನ್ನು ಸಂಚಾರಕ್ಕೆ ಬಿಡದಿರಲು ನಿರ್ಧಾರ ಕೈಗೊಂಡಿರುವುದಾಗಿ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಮಂಜುನಾಥ್ ಕಮ್ಮತ್ತಹಳ್ಳಿ ತಿಳಿಸಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿನಿತ್ಯ ಏರಿಳಿತವಾಗುವುದರಿಂದ ಬಸ್‌ಗಳ ಮಾಲೀಕರು ಸಂಕಷ್ಟದಲ್ಲಿದ್ದಾರೆ. ಇದಲ್ಲದೇ ಕಳೆದ ಮೊದಲ ಹಾಗೂ ಎರಡನೇ ಕೊರೊನಾ ಅಲೆ ಲಾಕ್‌ಡೌನ್ ಜಾರಿಗೊಳಿಸಿದ ಸಂದರ್ಭದಲ್ಲಿ ಬಸ್ ಸಂಚಾರವಿಲ್ಲದೆ ತೀವ್ರ ತೊಂದರೆ ಅನುಭವಿಸಿದ್ದೇವೆ ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲೂ ಕೂಡ ತೆರಿಗೆ ಕಡಿತಗೊಳಿಸಲು ಸರ್ಕಾರಕ್ಕೆ ಬಸ್ ಮಾಲೀಕರ ಸಂಘ ಒತ್ತಡ ಹಾಕಿದ್ದರೂ ಸ್ಪಂದಿಸಲಿಲ್ಲ. ಇದೀಗ 3 ನೇ ಅಲೆ ಹಿನ್ನೆಲೆಯಲ್ಲಿ ವಾರಾಂತ್ಯ ಕರ್ಫ್ಯೂ ವಿಧಿಸಿದ್ದು, ಬಸ್ ಮಾಲೀಕರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿದೆ. ಈಗಲಾದರೂ ಸರ್ಕಾರ ಸಮಸ್ಯೆ ಅರಿತು ತೆರಿಗೆ ಕಡಿತಗೊಳಿಸುವಂತೆ ಮಂಜುನಾಥ್ ಕಮ್ಮತ್ತಹಳ್ಳಿ ಆಗ್ರಹಿಸಿದ್ದಾರೆ.

## ದುಗ್ಗಮ್ಮನ ದೇವಸ್ಥಾನದಲ್ಲಿ ಇಂದು - ನಾಳೆ ಅಮ್ಮನವರ ದರ್ಶನ ಇಲ್ಲ



ದಾವಣಗೆರೆ,ಜ.7- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ನಾಳೆ ದಿನಾಂಕ 8ರ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ ಪೂಜಾ ವಿಧಿ-ವಿಧಾನಗಳನ್ನು ಮುಗಿಸಿ, ಬೆಳಿಗ್ಗೆ 8 ಗಂಟೆ ನಂತರ ದೇವಸ್ಥಾನವನ್ನು ಬಂದ್ ಮಾಡಲಾಗುವುದು. ಓಮಿಕ್ರಾನ್ ವೈರಾಣು ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳನ್ವಯ ಈ ಕ್ರಮ ಕೈಗೊಳ್ಳಲಾಗಿದೆ ಎಂದು ದೇವಸ್ಥಾನದ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.


## ಕೊರೊನಾ ಮುಂಚಿನ ಹಂತಕ್ಕೆ ಮರಳಿದ ಜಿ.ಡಿ.ಪಿ.

ನವದೆಹಲಿ, ಜ. 7 – ದೇಶದ ಆರ್ಥಿಕ ವ್ಯವಸ್ಥೆ 2021-22ರ ಸಾಲಿನಲ್ಲಿ ಶೇ.9.2ರ ಬೆಳವಣಿಗೆ ಕಂಡಿದೆ. ಇದರೊಂದಿಗೆ ದೇಶದ ಆರ್ಥಿಕತೆಯ ಗಾತ್ರ ಕೊರೊನಾಗೆ ಮುಂಚಿನ ದಿನಗಳಿಗೆ ಮರಳಿದೆ. ಕೃಷಿ, ಗಣಿ ಹಾಗೂ ಉತ್ಪಾದನಾ ವಲಯದಲ್ಲಿ ಆಗಿರುವ ಏರಿಕೆ ಇದಕ್ಕೆ ಕಾರಣವಾಗಿದೆ. 2020-21ರಲ್ಲಿ ಜಿ.ಡಿ.ಪಿ. ಶೇ.7.3ರಷ್ಟು ಕುಸಿದಿತ್ತು. ಕೊರೊನಾ ಕಾರಣದಿಂದ ಹೇರಲಾಗಿದ್ದ ಲಾಕ್‌ಡೌನ್ ಇದಕ್ಕೆ ಕಾರಣವಾಗಿತ್ತು.

2011-12ರ ಸಾಲಿನ ಸ್ಥಿರ ಬೆಲೆಗಳ ಅನ್ವಯ 2021-22ರ ಸಾಲಿನ ಜಿ.ಡಿ.ಪಿ. ಮೌಲ್ಯ 147.54 ಲಕ್ಷ ಕೋಟಿ ರೂ. ಆಗಿದೆ. 2020-21ರ ಸಾಲಿನಲ್ಲಿ ಅದರ ಮೌಲ್ಯ 135.13 ಲಕ್ಷ ಕೋಟಿ ರೂ. ಆಗಿತ್ತು ಎಂದು ರಾಷ್ಟ್ರೀಯ ಅಂಕಿ ಅಂಶಗಳ ಇಲಾಖೆ (ಎನ್.ಎಸ್.ಓ.) ತಿಳಿಸಿದೆ.

2019-20ರಲ್ಲಿ ಜಿ.ಡಿ.ಪಿ. ಮೌಲ್ಯ 145.69 ಲಕ್ಷ ಕೋಟಿ ರೂ. ಆಗಿತ್ತು. 2021-22ರಲ್ಲಿ ಜಿ.ಡಿ.ಪಿ. ಆ ಹಂತವನ್ನು ದಾಟಲಿದೆ ಎಂದು ಅಂದಾಜಿಸಲಾಗಿದೆ.

## ಜಿಲ್ಲೆಯಲ್ಲಿ 18 ಜನರಿಗೆ ಪಾಸಿಟಿವ್



ದಾವಣಗೆರೆ, ಜ.7- ಜಿಲ್ಲೆಯಲ್ಲಿ ಶುಕ್ರವಾರ 18 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. ದಾವಣಗೆರೆ ತಾಲ್ಲೂಕಿನ 16 ಹಾಗೂ ಜಗಳೂರು ತಾಲ್ಲೂಕಿನ ಇಬ್ಬರಲ್ಲಿ ಸೋಂಕು ಕಂಡು ಬಂದಿದೆ. ಜಿಲ್ಲೆಯಲ್ಲಿ 39 ಸಕ್ರಿಯ ಪ್ರಕರಣಗಳಿವೆ.

ಕಳೆದ ಹಲವು ದಿನಗಳಿಂದ ಸೋಂಕಿತರ ಸಂಖ್ಯೆ ಮೂರರ ಗಡಿ ದಾಟಿರಲಿಲ್ಲ. ಬಹು ದಿನಗಳ ನಂತರ ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆ ದಿಢೀರ್ ಏರಿಕೆ ಕಂಡಿದೆ.

ಇಲ್ಲಿಯವರಿಗೆ ಜಿಲ್ಲೆಯಲ್ಲಿ 51065 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿತ್ತು. 50418 ಜನರು ಚಿಕಿತ್ಸೆ ಪಡೆದು ಗುಣಮುಖರಾಗಿದ್ದರೆ, 608 ಜನರು ಮೃತಪಟ್ಟಿದ್ದರು. ಡಿ.1 ರಿಂದ ಜ.7ರವರೆಗೆ ಒಟ್ಟಾರೆ 10023 ಶಾಲಾ-ಕಾಲೇಜು, ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿದ್ಯಾರ್ಥಿಗಳ ಕೋವಿಡ್ ಪರೀಕ್ಷೆ ಮಾಡಲಾಗಿದ್ದು, 9509 ವರದಿಗಳು ನೆಗೆಟಿವ್ ಬಂದಿದೆ. ದೇವರಹಳ್ಳಿ ನವೋದಯ ಶಾಲೆಯಲ್ಲಿ ನಾಲ್ಕು ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. 510 ಜನರ ಫಲಿತಾಂಶ ಇನ್ನೂ ಬರಬೇಕಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

## ವಿದೇಶದಿಂದ ಬರುವ ಎಲ್ಲರಿಗೂ ಕ್ವಾರಂಟೈನ್

ನವದೆಹಲಿ, ಜ.7 – ವಿದೇಶದಿಂದ ಬರುವ ಪ್ರಯಾಣಿಕರಿಗೆ ಇರುವ ಮಾರ್ಗಸೂಚಿಗಳನ್ನು ಬದಲಿಸಿರುವ ಕೇಂದ್ರ ಸರ್ಕಾರ, ಎಲ್ಲರಿಗೂ 7 ದಿನಗಳ ಮನೆ ಕ್ವಾರಂಟೈನ್ ಹಾಗೂ 8ನೇ ದಿನ ಆರ್.ಟಿ. - ಪಿ.ಸಿ. ಆರ್. ಪರೀಕ್ಷೆ ಕಡ್ಡಾಯಗೊಳಿಸಿದೆ. ಜ.11 ರಿಂದ ಹೊಸ ಮಾರ್ಗ ಸೂಚಿಗಳನ್ನು ಜಾರಿಗೆ ಬರಲಿವೆ. ಅಪಾಯ ಇರುವ ದೇಶಗಳಿಂದ ಬರುವ ಪ್ರಯಾಣಿಕರು, ಆಗಮನದ ನಂತರ ಟೆಸ್ಟ್‌ಗೆ ಒಳಗಾಗುವ ಹಾಗೂ ಫಲಿತಾಂಶ ಬರುವರೆಗೂ ವಿಮಾನ ನಿಲ್ದಾಣದಲ್ಲೇ ಇರುವ ನಿಯಮವನ್ನು ಮುಂದುವರೆಸಲಾಗಿದೆ.


## ವಿ.ಪಿ. ಲಕ್ಷ್ಮೀನಾರಾಯಣ ಅವರಿಗೆ ಮಾತೃ ವಿಯೋಗ



ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಹಳ್ಳಿ ಗ್ರಾಮದ ದಿ. ವದ್ದಿ ಪುಟ್ಟಣ್ಣನವರ ಧರ್ಮಪತ್ನಿ

**ಶ್ರೀಮತಿ ವದ್ದಿ ಸಾಕಮ್ಮ**

ಅವರು ದಿನಾಂಕ 7.1.2022ರ ಶುಕ್ರವಾರ ವಯೋಸಹಜದಿಂದ ಬೆಂಗಳೂರಿನ ನಿವಾಸದಲ್ಲಿ ನಿಧನರಾದರು. ಮೃತರಿಗೆ ಸುಮಾರು 90 ವರ್ಷ ವಯಸ್ಸಾಗಿತ್ತು. ಮೈಸೂರಿನ ವರಲಕ್ಷ್ಮಿ ಸಿಲ್ಕ್ಸ್ ಸ್ಯಾರೀಸ್ ಮಾಲೀಕರೂ, ದಾವಣಗೆರೆಯ ವಿಪಿಎಲ್ ಗಾರ್ಮೆಂಟ್ಸ್ ಮಾಲೀಕರೂ, ದಾವಣಗೆರೆ ಲಯನ್ಸ್ ಕ್ಲಬ್ ನಿರ್ದೇಶಕರೂ ಆದ ವಿ.ಪಿ. ಲಕ್ಷ್ಮೀನಾರಾಯಣ ಸೇರಿದಂತೆ, ಆರು ಜನ ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.1.2022ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಕೊಂಡ್ಲಹಳ್ಳಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ


# ಚಿಕ್ಕನಹಳ್ಳಿ ಹೊಸ ಬಡಾವಣೆಯಲ್ಲಿ ಪುನೀತ್ ಪುತ್ಥಳಿ



## ಪುನೀತ್ ಸಮಾಜ ಸೇವೆಯ ಸೈನಿಕ: ಮಾಜಿ ಯೋಧರ ಅಭಿಮತ

ದಾವಣಗೆರೆ, ಜ.7 - ನಿಟುವಳ್ಳಿಯ ಚಿಕ್ಕನಹಳ್ಳಿ ಹೊಸ ಬಡಾವಣೆಯಲ್ಲಿನ ಬನ್ನಿ ಮಹಾಂಕಾಳಿ ದೇವಸ್ಥಾನದ ಹತ್ತಿರ ಕರುನಾಡ ರತ್ನ ಪುನೀತ್ ರಾಜ್ ಕುಮಾರ್ ಅಭಿಮಾನಿ ಬಳಗವು ಸ್ಥಾಪಿಸಿರುವ ಪುನೀತ್ ರಾಜ್ ಕುಮಾರ್ ಅವರ ಪುತ್ಥಳಿ ಇಂದು ಅನಾವರಣಗೊಂಡಿತು.

ಮಾಜಿ ಯೋಧರಾದ ಎನ್. ರಾಘವೇಂದ್ರ, ಕೆ.ಪಿ. ಚಂದ್ರಪ್ಪ ಹಾಗೂ ಚೆನ್ನಬಸವನ ಗೌಡ ಗೌಡರ್ ಮತ್ತು ಬಾಡಾ ಕ್ರಾಸ್ ನಲ್ಲಿರುವ ವೀರೇಶ್ವರ ಪುಣ್ಯಾಶ್ರಮದ ವಿಶೇಷ ಚೇತನ ಮಕ್ಕಳಿಂದ ಪುನೀತ್ ಪುತ್ಥಳಿ ಅನಾವರಣಗೊಂಡಿತು. ಪುನೀತ್ ಅಭಿಮಾನಿಗಳು, ಬನ್ನಿ ಮಹಾಂಕಾಳಿ ದೇವಸ್ಥಾನ ಸಮಿತಿಯವರು ಸಹಕಾರ ನೀಡಿದರು.

ಮಾಜಿ ಯೋಧ ಎನ್. ರಾಘವೇಂದ್ರ ಮಾತನಾಡಿ, ಯೋಧರು ಗಡಿಗಳಲ್ಲಿ ದೇಶದ ರಕ್ಷಣೆಗೆ ಸೇವೆ ಮಾಡಿದಂತೆ ಪುನೀತ್ ರಾಜ್ ಕುಮಾರ್ ಅವರು ಸಮಾಜಮುಖಿ ಸೇವೆ ಮಾಡುವ ಮುಖೇನ ಸಮಾಜ ಸೇವೆಯ ಸೈನಿಕರಾಗಿದ್ದರು. ನಮ್ಮಿಂದ ಅವರ ಪುತ್ಥಳಿ ಅನಾವರಣಗೊಳಿಸುತ್ತಿರುವುದು ನಮ್ಮ ಪುಣ್ಯ. ಇಂತಹ ಸಮಾಜ ಮುಖಿ ಯೋಧರಾಗಲು ಯುವ ಪೀಳಿಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಮತ್ತೋರ್ವ ಮಾಜಿ ಯೋಧ ಕೆ.ಪಿ. ಚಂದ್ರಪ್ಪ ಮಾತನಾಡಿ, ಯುವ ಸಮೂಹ ದುಶ್ಚಟಗಳಿಗೆ ದಾಸರಾಗಬಾರದು. ಇದಕ್ಕೆ ಹಣ ವ್ಯಯಿಸಿ ಜೀವನ ಹಾಳು ಮಾಡಿಕೊಳ್ಳುವ ಬದಲಿಗೆ ಪುನೀತ್ ಅವರಂತೆ ಸಮಾಜ ಸೇವೆಯಲ್ಲಿ ತೊಡಗಿಕೊಂಡು ಬೇರೆಯವರ ಬಾಳಿಗೆ ಬೆಳಕಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಇನ್ನೋರ್ವ ಮಾಜಿ ಯೋಧ ಚೆನ್ನಬಸವನ ಗೌಡ ಗೌಡರ್ ಮಾತನಾಡಿ, ಪುನೀತ್ ಅವರ ಸಮಾಜಮುಖಿ ಸೇವೆ ಅಪಾರವಾಗಿದ್ದು, ಅವರ ಸ್ಫೂರ್ತಿ ಯುವಪೀಳಿಗೆಗೆ ಆದರ್ಶವಾಗಬೇಕು. ಈ ನಿಟ್ಟಿನಲ್ಲಿ ಪುನೀತ್ ರಾಜ್ ಕುಮಾರ್ ಅವರ ವ್ಯಕ್ತಿತ್ವ ಮತ್ತು ಸೇವೆ ನೆನಪಿಸಲು ಅವರ ಪುತ್ಥಳಿ ಪ್ರತಿ ಗ್ರಾಮಗಳಲ್ಲೂ ಉದ್ಘಾಟನೆಯಾಗಬೇಕು ಎಂದು ಆಶಿಸಿದರು.

ಚಿಕ್ಕನಹಳ್ಳಿ ಹೊಸ ಬಡಾವಣೆಯ ಬನ್ನಿ ಮಹಾಂಕಾಳಿ ದೇವಸ್ಥಾನ ಹತ್ತಿರದ ವೃತ್ತಕ್ಕೆ ಪುನೀತ್ ರಾಜಕುಮಾರ್ ವೃತ್ತ ಎಂದು ಹೆಸರಿಡಲಾಯಿತು. ಅಲ್ಲದೇ ಪಾಲಿಕೆಯಿಂದ ಆ ಹೆಸರಿನ ನಾಮಫಲಕವೂ ಉದ್ಘಾಟನೆಯಾಯಿತು.

ಪುನೀತ್ ರಾಜಕುಮಾರ್ ಅವರ ಸಾಮಾಜಿಕ ಕಳಕಳಿ ಮತ್ತು ಅವರು ಮಾಡಿದಂತಹ ಸಮಾಜ ಸೇವಾ ಕಾರ್ಯಗಳನ್ನು ನೆನಪಿಸಿಕೊಳ್ಳಲಾಯಿತು. ಪುನೀತ್ ರಾಜಕುಮಾರ್ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ಸುಮಾರು ಸಾವಿರ ಜನರಿಗೆ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಪಾಲಿಕೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಉಮಾ ಪ್ರಕಾಶ್, ಎ.ವೈ. ಪ್ರಕಾಶ್, ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಯು. ರಾಜೇಂದ್ರ, ಕಾರ್ಯದರ್ಶಿ ಮಾರ್ಕಂಡೇಯ, ಉಪಾಧ್ಯಕ್ಷ ಓ.ಜಿ. ಶಿವಕುಮಾರ್, ಖಜಾಂಚಿ ಕೇಶವ, ಸಂಘಟನಾ ಕಾರ್ಯದರ್ಶಿ ನಾಗರಾಜ, ಸದಸ್ಯರುಗಳಾದ ಆನಂದಪ್ಪ, ಮಹಾಲಿಂಗಪ್ಪ, ವೀರೇಶ್, ವಾಸು, ಕೇಶವ್, ಯಲ್ಲಪ್ಪ, ಮಹಮ್ಮದ್ ರಫೀಕ್, ಹನುಮಂತಪ್ಪ, ವಿನಾಯಕ ಸೇರಿದಂತೆ ಅಭಿಮಾನಿಗಳು ಇದ್ದರು.


॥ ಶ್ರೀ ಉಜ್ಜಯಿನಿ ಮರುಳಸಿದ್ದೇಶ್ವರ ಪ್ರಸನ್ನ ॥

## ಶಿವಗಣಾರಾಧನೆಯ ಆಹ್ವಾನ ಪತ್ರಿಕೆ



ವಿಜಯನಗರ ಜಿ॥ ಹರಪನಹಳ್ಳಿ ತಾ॥ ಉಚ್ಚಂಗಿದುರ್ಗ ಗ್ರಾಮದ ವಾಸಿ

ದಿ॥ ಶ್ರೀ ಪಕ್ಕೀರಗೌಡ್ರು ಇವರ ಧರ್ಮಪತ್ನಿ ಶ್ರೀಮತಿ ವತ್ಸಲ ಮತ್ತು ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ : 31.12.2021ನೇ ಶುಕ್ರವಾರ, ಮಧ್ಯಾಹ್ನ 2.15ಕ್ಕೆ ನನ್ನ ಮಗಳಾದ

**ಕು. ಆಶಾ ಪಕ್ಕೀರಗೌಡ್ರು**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಶಿವಗಣಾರಾಧನೆಯನ್ನು**

ದಿನಾಂಕ 08.01.2022ನೇ ಶನಿವಾರ, ಬೆಳಿಗ್ಗೆ 11.00 ಕ್ಕೆ ದಾವಣಗೆರೆ ನಗರದ ಹದಡಿ ರಸ್ತೆಯ ಐಟಿಐ ಕಾಲೇಜು ಆವರಣದಲ್ಲಿರುವ ಶ್ರೀಚೌಡೇಶ್ವರಿ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಶ್ರೀಮತಿ ವತ್ಸಲ ಪಕ್ಕೀರ ಗೌಡ್ರು ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬದವರು ಹಾಗೂ ಬಂಧು-ಮಿತ್ರರು.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte